ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ
ಸಂಪುಟ 6 ಸಂಚಿಕೆ 44
೩೧ ಆಗಸ್ಟ್ ೧೯೫೮
★
ಪುಟ ೧೦ ಬೆಲೆ: ೧೩ ನಯೇ ಪೈಸೆ

ಆಗ್ನೇಯೇಶ್ಯಾಕ್ಕೆ ಅಮೇರಿಕೆಯಿಂದ ಗಂಡಾಂತರ!

ಹಿಂದೂ ಮಹಾಸಾಗರದಲ್ಲಿ ಅಮೇರಿಕನ್ ಸೈನ್ಯ

ಭಾರತದ ಬಾಗಿಲಲ್ಲಿ ಅಪಾಯ

ಅಮೆರಿಕೆಯ ಏಳನೆಯ ಫ್ಲೀಟ್ ಸೈನ್ಯಪಡೆ ಜಪಾನಿನ ಸಮುದ್ರದಲ್ಲಿ ಇದೀಗ ತಾನೆ ಬೀಡು ಬಿಟ್ಟದ್ದರೆ ಈ ಮೊದಲು ಸಿಂಗಪೂರಿನ ಬಳಿಯಲ್ಲಿ ಸಮರ ನೌಕಾ ಸೈನಿಕ ತಂಡಗಳು ನೆಲೆಯೂರಿವೆ. ಸಿಂಗಪೂರಿನಲ್ಲಿರುವ ಅಮೆರಿಕೆಯ ಕನ್ಸುಲೇಟ್ ಈ ಸೈನ್ಯ ಪಡೆಯು ವಿಚಾರವಾಗಿ ಹೇಳುತ್ತ "ವಿರಾಮ ವಿಶ್ರಾಂತಿಗಾಗಿ ಆಗಮಿಸಿದ್ದಾರೆ'' ಎಂದು ಹೇಳಿದರು. ಆದರೆ ಅಮೆರಿಕಾ ಸೈನಿಕ ವಕ್ತಾರರೊಬ್ಬರು ಅಮೆರಿಕೆಯ ಸಮರ ನೌಕೆಗಳು ಸಿಂಗಪೂರಿನಲ್ಲಿ ವಿಶೇಷ ಸೈನಿಕ ತರಬೇತಿಗಾಗಿ ಇವೆ ಎಂದು ಹೇಳಿದ್ದಾರೆ. ಸಿಂಗಪೂರಿನಲ್ಲಿ ಆರು ಸಮರನೌಕೆಗಳು ಮತ್ತು ೨,೦೦೦ ಜನ ಅಧಿಕಾರಿಗಳಿರುವರೆಂದು ಅಂದಾಜು ಮಾಡಲಾಗಿದೆ. ಸಂಪೂರ್ಣ ಮೂರನೆಯ ನೌಕಾಪಡೆ ಓಕಿನವಾದ ಕಡೆಗೆ ಸಾಗುತ್ತಿದೆ. ಸಿಂಗಪೂರಿನಲ್ಲಿ ಬೀಡು ಬಿಟ್ಟಿರುವ ಅಮೆರಿಕೆಯ ಸೆನ್ಯಪಡೆ ಇಂಡೋನೇಶಿಯಾಕ್ಕೂ ಭಾರತಕ್ಕೂ ಬೆದರಿಕೆಯ ಲಕ್ಷಣಗಳಾಗಿವೆ.

ಭಾರತ ಸರ್ಕಾರ,ಭಾರತೀಯ ಜನತೆ ಸಕಾಲದಲ್ಲಿ ಆಕ್ರಮಣಕಾರೀ ಅಮೆರಿಕೆಯ ಈ ನೀತಿಯನ್ನು ಗಮನಿಸದಿದ್ದರೆ ಮಧ್ಯಪೂರ್ವದ ಪುನರಾವೃತ್ತಿ ಪೂರ್ವದಲ್ಲಾಗುವ ಲಕ್ಷಣಗಳು ಕಂಡು ಬಂದರೆ ಆಶ್ಚರ್ಯವೇನಿಲ್ಲ. ಪೂರ್ವದಲ್ಲಿರುವ ಬ್ರಿಟನ್ನಿನ ವಸಹಾತುಗಳ ರಕ್ಷಣೆಗಾಗಿ ಸುತ್ತುಗಟ್ಟುತ್ತಿರುವ ಅಮೆರಿಕೆಯು ಹಿಂದೂ ಮಹಾ ಸಾಗರದಲ್ಲಿ ತನ್ನ ಸೈನಿಕ ಕಾರ್ಯಾಚರಣೆಯ ಕ್ಷೇತ್ರವೊಂದನ್ನು ನಿರ್ಮಿಸಲು ಯೋಚಿಸುತ್ತಿದೆಯೆಂದು ತಿಳಿದಿದೆ.

ಅದು ಆರನೆಯದು, ಇದು ಏಳನೆಯದು

ಅಮೆರಿಕೆಯ ಈ "ವಿಶೇಷೋದ್ದೇಶ" ಹೊಂದಿರುವ ಫ್ಲೀಟ್‌ಗಳ ಕತೆ ಈಗ ಚನ್ನಾಗಿ ನಮಗೆಗೊತ್ತಾಗಿದೆ. ಇವು ಆಕ್ರಮಣಕ್ಕಾಗಿ ಇರುವ ಅಮೇರಿಕೆಯ "ಸಂಚಾರಿ ಸೈನಿಕ ನೆಲೆ"ಗಳೆಂಬುವದರಲ್ಲಿ ಸಂದೇಹವಿಲ್ಲ. ಈ ಫ್ಲೀಟ್‌ಗಳಲ್ಲಿ ಒಂದಾದ ಆರನೆಯದು ಮೆಡಿಟರೇನಿಯನ್ ಪ್ರದೇಶದಲ್ಲಿ ಝಂಡಾ ಊರಿದ್ದು ಏಳನೆಯದು ಇದೀಗ ಅಮೇರಿಕೆಯ ಪ್ರಭುತ್ವದಲ್ಲಿರುವ ಚೀನದ ದ್ವೀಪವಾದ ಟೈವಾನ್‌ನನ್ನು ಸುತ್ತುಗಟ್ಟಿ ನಿಲ್ಲುತ್ತಿದೆ. ಪಶ್ಚಿಮ ಏಷ್ಯಾದಲ್ಲಿ ಅಮೇರಿಕೆಯ ಆಕ್ರಮಣ ಕಾರ್ಯ ನಡೆದುದು ಆರನೆಯ ಫ್ಲೀಟ್ ಸೈನ್ಯಪಡೆಯಿಂದ. ಪೂರ್ವ ಏಶ್ಯಾದಲ್ಲಿ ಏಳನೆಯ ಫ್ಲೀಟ್ ಈಗ ನೆಲೆಯೂರಿದೆ.

ಆಗ್ನೇಯ ಏಷ್ಯಾಕ್ಕೆ ಗಂಡಾಂತರಕಾರಿ !

ಹಿಂದೂ ಮಹಾಸಾಗದಲ್ಲಿ ನೆಲೆಯೂರುವ ಅಮೇರಿಕೆಯ ಈ ಫ್ಲೀಟ್‌ನ ಈ ತರಪೇತು ಎಷ್ಟು ದಿನ ? ಯಾರ ಮೇಲೆ ತುಫಾಕಿಗಳನ್ನು ಹಾರಿಸಲು ಇಲ್ಲಿ ಸೈನಿಕರಿಗೆ ತರಪೇತು ಕೊಡುತ್ತಿದ್ದಾರೆ ?

ನಿಸ್ಸಂದೇಹವಾಗಿ ಈ ಧಾಳಿ ಇಂಡೋನೇಸಿಯಾ, ಇಂಡಿಯಾ, ಬರ್ಮಾ, ಸಿಲೋನ್, ಕಾಂಬೋಡಿಯಾ ಹಾಗೂ ಇನ್ನಿತರ ಪಂಚಶೀಲ ತತ್ವಾನುಯಾಯಿ ಹಾಗೂ ಸೈನಿಕ ಕೂಟಗಳಲ್ಲಿ ಸೇರದ ರಾಷ್ಟ್ರಗಳ ಮೇಲೆ ಎಂದು ಹೇಳಬಹುದಾಗಿದೆ. ಆಗಲೇ ಅಮೇರಿಕೆಯು ಇಂಡೋನೇಷ್ಯಾದಲ್ಲಿ ತನ್ನ ಕೈಹಾಕಿದೆ. ಈಗೊಂದು ವಾರದ ಕೆಳಗೆ ವಾಶಿಂಗ್ಟನ್ ವರದಿ "ಮಧ್ಯ

(೯ನೇ ಪುಟ ನೋಡಿ)

ಕೇರಳದ ನಿಜಸ್ಥಿತಿಯನ್ನು ತಿಳಿದು ಜನತೆಗೂ ತಿಳುಹಿಸಿ - ಪಾರ್ಟಿ ಸದಸ್ಯರಿಗೆ ಕರೆ !

ಇತ್ತೀಚೆಗೆ ಕೇರಳದಲ್ಲಿ ನಡೆದ ಘಟನೆಗಳು ಎಲ್ಲರ ಗಮನವನ್ನು ಸೆಳೆದಿವೆ. ಆದರೆ ಅಲ್ಲಿ ನಡೆದ ವಿವಿಧ ಘಟನೆಗಳ ಬಗ್ಗೆ ಸಂಪೂರ್ಣ ವಿವರಗಳು ದಿನಪತ್ರಿಕೆಗಳಲ್ಲಿ ಪ್ರಕಟವಾಗಿಲ್ಲ. ಅವುಗಳ ಪ್ರಚೋದನೆಗೆ ಕಾರಣೀಭೂತರಾದ ಪ್ರತಿಗಾಮಿ ಶಕ್ತಿಗಳ ಪಾತ್ರವೂ ಪ್ರಕಟವಾಗದಿರುವ ಕಾರಣ ಅಲ್ಲಿಯ ನಿಜ ಪರಿಸ್ಥಿತಿಯನ್ನರಿಯಲು ಅನೇಕರಿಗೆ ಕಷ್ಟವಾಗಿದೆ. ಕಮ್ಯೂನಿಸ್ಟ್ ಸರಕಾರ ಜನತೆಯ ಮೇಲೆ ದಬ್ಬಾಳಿಕೆ ನಡೆಸುತ್ತಿದೆಯೆಂಬ ತಪ್ಪು ಅಭಿಪ್ರಾಯಕ್ಕೆ ಕೆಲವು ಕಡೆ ಇದು ಎಡೆ ಕೊಟ್ಟಿದೆ.

ಕೇರಳದಲ್ಲಿ ನಡೆದ 'ಹೋರಾಟ' ಗಳ ನಿಜಸ್ವರೂಪವೇನು ? ಕಮ್ಯೂನಿಸ್ಟ್ ಸರಕಾರ ಏನು ಸಾಧಿಸಿದೆ ? ವಿರೋಧಿ ಪಕ್ಷಗಳು ಯಾವ ಪಾತ್ರ ವಹಿಸಿವೆ ? ಅಲ್ಲಿ ಜನಜೀವನಕ್ಕೂ ಆಸ್ತಿಗೂ ಅಪಾಯ ಒದಗಿದೆಯೇ ? ಶಾಂತಿ ಮತ್ತು ಸುಭದ್ರತೆಗೇನಾದರೂ ಧಕ್ಕೆ ಬಂದಿದೆಯೇ ? ಆಡಳಿತೆ ನಡೆಸುವುದರಲ್ಲಿ, ಜನತೆಯ ಬೇಡಿಕೆಯನ್ನು

ಎನ್. ಎಲ್. ಉಪಾಧ್ಯಾಯ

ಈಡೇರಿಸುವುದರಲ್ಲಿ ಕಮ್ಯೂನಿಸ್ಟ್ ಪಾರ್ಟಿ ಎಷ್ಟು ಯಶಸ್ವಿಯಾಗಿದೆ ? ಮುಂತಾದ ಅನೇಕ ಪ್ರಶ್ನೆಗಳ ಬಗ್ಗೆ ಸರಿಯಾದ ಸ್ಪಷ್ಟೀಕರಣವನ್ನು ಜನ ಅಪೇಕ್ಷಿಸುತ್ತಿದೆ.

ಪ್ರಧಾನಿ ನೆಹರೂ ಅವರು ಹೇಳಿಕೆ ಕೊಟ್ಟ ಮೇಲಂತೂ ಇದು ಇನ್ನೂ ಹೆಚ್ಚು ಮಹತ್ವದ್ದಾಗಿರುತ್ತದೆ.

ಈ ತಿಂಗಳ ಮಧ್ಯದಲ್ಲಿ ಸೇರಿದ ಭಾರತ ಕಮ್ಯೂನಿಸ್ಟ್ ಪಾರ್ಟಿಯ ಕೇಂದ್ರ ಕಾರ್ಯಕಾರಿ ಸಮಿತಿಯ ಸಭೆಯು ಕೇರಳದ ಪರಿಸ್ಥಿತಿಯನ್ನು ಕೂಲಂಕುಷವಾಗಿ ಚರ್ಚಿಸಿ ಅಲ್ಲಿ ನಡೆದ ಘಟನೆಗಳ ಬಗ್ಗೆ ಹೊಸ ಬೆಳಕನ್ನು ಚೆಲ್ಲಿದೆ. ಅದು ಮಾಡಿದ ನಿರ್ಣಯ ಮಹತ್ವದ್ದಾಗಿದೆ. ಪರಿಸ್ಥಿತಿಯನ್ನು ಪರಿಶೀಲಿಸುತ್ತಾ ಎರಡು ಮೂಲಭೂತ ವಿಷಯಗಳ ಬಗ್ಗೆ ಅದು ಎಲ್ಲರ ಗಮನವನ್ನು ಸೆಳೆದಿದೆ.

1. ಪ್ರಜಾಪ್ರಭುತ್ವ ರೀತಿಯಲ್ಲಿ ಜನತೆಯ ಮತ ಪಡೆದು ಆರಿಸಿ ಬಂದ ಕೇರಳ ರಾಜ್ಯದ ಕಮ್ಯೂನಿಸ್ಟ್ ಸರಕಾರದಲ್ಲಿ ಕಾಂಗ್ರೆಸ್ ಪಕ್ಷವು ಕೇಂದ್ರ ಸರಕಾರದ ಮೂಲಕ ಕೈ ಹಾಕುವುದರ ಔಚಿತ್ಯ ;

(೯ನೇ ಪುಟ ನೋಡಿ)

ಪಣವಿಟ್ಟಿದ್ದ ಕಾಂಗ್ರೆಸ್ ಪ್ರತಿಷ್ಠೆಯ ಪತನ

ಭವಾನಿಪುರದಲ್ಲಿ ಸಿದ್ಧಾರ್ಥರೇ ವಿಜಯ

ಉಪಚುನಾವಣೆಗಳಲ್ಲಿ ಮತ್ತೊಮ್ಮೆ ಕಾಂಗ್ರೆಸ್ ಮುಖಭಂಗದ ನಿದರ್ಶನ !

ಬಂಗಾಲ ಕಾಂಗ್ರೆಸ್ ಸಚಿವ ಸಂಪುಟದ ಪ್ರತಿಗಾಮೀ ಹಾಗೂ ಜನಹಿತ ಮಾರಕ ನೀತಿಗಳನ್ನು ಬಯಲಿಗೆಳೆದು ನ್ಯಾಯಾಂಗ ಶಾಖಾ ಸಚಿವಸ್ಥಾನಕ್ಕೆ ಮಾರ್ಚ್ ೨೪ರಂದು ರಾಜೀನಾಮೆಯಿತ್ತಿದ್ದ ಸಿದ್ಧಾರ್ಥರೇಯವರು ಕಾಂಗ್ರೆಸ್ಸಿಗಿದಿರಾಗಿ ಮತ್ತೆ ಸ್ಪರ್ಧಿಸಿ ಉಪಚುನಾವಣೆಯಲ್ಲಿ ವಿಜಯಿಗಳಾಗಿ ಬಂದಿದ್ದಾರೆ. ದೇಶದ ಜನರ ಕಣ್ಣೇ ಈ ಚುನಾವಣೆಯ ಮೇಲಿತ್ತು. ಕಳೆದ ೨೪ನೇ ತಾರೀಕು ಈ ಚುನಾವಣೆ ನಡೆಯಿತು.

ಶ್ರೀ ರೇಯವರಿಗೆ 23,222 ಮತಗಳು ಬಂದರೆ ಅವರ ಪ್ರತಿಸ್ಪರ್ಧಿ ಕಾಂಗ್ರೆಸ್ ಉಮೇದುವಾರ ಬಿಜಯ್ ಬ್ಯಾನರ್ಜಿಯವರಿಗೆ ಕೇವಲ 12,684 ಮತಗಳು ಬಂದಿವೆ. ಇನ್ನೊಬ್ಬ ಉಮೇದುವಾರ ಶ್ರೀ ಆರ್. ಭೂನಿಯಾ ಅವರು 289 ಮತಗಳನ್ನು ಸಂಪಾದಿಸಿದ್ದಾರೆ। ಠೇವಣಾತಿ ಕಳೆದುಕೊಂಡರು.

ಸ್ವತಂತ್ರ ಸದಸ್ಯರಾದ ಶ್ರೀ ರೇಯವರು ಸರಕಾರದ ಆಹಾರ ನೀತಿಯನ್ನು ಕಟುವಾಗಿ ಖಂಡಿಸಿದ್ದರು. ಚುನಾವಣೆಯಾದ ಬಳಿಕ ರೇ "ಜನಸರಕಾರದ ಆಹಾರ ನೀತಿಗೆ ವಿರೋಧವಾಗಿದೆ ಎಂಬುದನ್ನು ತೋರಿಸಿಕೊಟ್ಟಿದೆ" ಎಂದು ತಿಳುಹಿಸಿದರು.

ಬಂಗಾಲ ಕಾಂಗ್ರೆಸ್ಸು ಈ ಚುನಾವಣೆಯನ್ನು ತನ್ನ "ಪ್ರತಿಷ್ಠೆಯ ಹೋರಾಟ" ಎಂದು ಹೇಳಿತ್ತು. ಅದರ ಪ್ರತಿಷ್ಠೆ ಸ್ಪಷ್ಟವಾಗಿ ಈಗ ಕಳಚಿಬಿತ್ತು.

ಕಾಂಗ್ರೆಸ್ ಉಮೇದುವಾರರ ಹಿಂದೆ ಧನಸಂಚಯ, ಬಂಡವಾಳಿಗರೂ ಲಂಚ ರುಷುವತ್ತುಗಳ ಕಾರ್ಯವೂ ಬೇಕಾದಷ್ಟು ಕೆಲಸ ಮಾಡಿ ಹಿಡಿದು ತಲಾ ಅವರಿಗೆ ದಿನವೊಂದಕ್ಕೆ ೨ರಿಂದ ೫ ರೂಪಾಯಿಗಳ ವರೆಗೂ ಕೊಡಲಾಯಿತು. ಚುನಾವಣೆ ನಡೆಯುವ ಸ್ಥಳವಾದ ಭವಾನಿಪುರಕ್ಕೆ ಸಾಮಾನ್ಯವಾಗಿ ಕಾಂಗ್ರೆಸ್ ಸಚಿವರೆಲ್ಲ ಒಂದು ಪ್ರಚಾರ ಮಾಡಿಹೋದರು. "ರೇ ದ್ರೋಹಿ" ಎಂದು ಎಲ್ಲೆಡೆಗೂ ಪ್ರಚಾರ ಮಾಡಿದರು.

ರೇಯವರಿಗೆ ಎಡಪಕ್ಷೀಯರ ಸಂಪೂರ್ಣ ಬೆಂಬಲವಿತ್ತು. ಅವರ ಪರವಾಗಿದ್ದ ಸಭೆಗಳಿಗೆ.ಸಹಸ್ರ ಸಂಖ್ಯೆಯಲ್ಲಿ ಜನಸೇರುತ್ತಿದ್ದರು. ಸ್ವಯಂಸೇವಕರು ಧಾವಿಸುತ್ತಿದ್ದರು. ಹೃದಯಸ್ಪರ್ಶಿಯಾದ ಒಂದು ಸಂಗತಿ ಇಲ್ಲಿದೆ:

ಅದೆಂದರೆ—

ದೇಶಬಂಧು ಚಿತ್ತರಂಜನ್ ದಾಸ್ ಅವರ ಪುತ್ರಿ ಮತ್ತು ಸಿದ್ಧಾರ್ಥ ರೇಯವರ ತಾಯಿಯಾದ ವಯೋವೃದ್ಧೆ ಶ್ರೀಮತಿ ಅಪರ್ಣಾದೇವಿ ಆಗಸ್ಟ್ 12ರಂದು ಮಾತನಾಡುತ್ತ ಹೀಗೆ ಹೇಳಿದರು:

"ನನ್ನ ಮಗನಿಗಾಗಿ ಓಟಿನ ಭಿಕ್ಷೆ ಕೇಳಲು ನಾನು ಬಂದಿಲ್ಲ. ಕಾಂಗ್ರೆಸ್ಸಿನ ಭ್ರಷ್ಟ ನೀತಿಗಳ ವಿರುದ್ಧ ಯುದ್ಧ ಘೋಷಣೆ ಮಾಡಲು ಇಲ್ಲಿಗೆ ಬಂದಿದ್ದೇನೆ.

"ದೇಶಬಂಧುವಿನ ಕಾಂಗ್ರೆಸ್ಸು ಬ್ರಿಟಿಷರೊಡನೆ ಹೋರಾಟದಲ್ಲಿ ತೊಡಗಿತ್ತು. ಆದರೆ ಇಂದಿನ ಕಾಂಗ್ರೆಸ್ಸು ಜನರಿಗೆ ಅನ್ನ ಬಟ್ಟೆಗಳನ್ನು ನೀಡದೆ ಅವರ ಹಿತಗಳ ವಿರುದ್ಧ ಹೋರಾಟದಲ್ಲಿ ತೊಡಗಿದೆ".

ಉಪಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ ನಡೆದಿರುವ ಮುಖಭಂಗಗಳಲ್ಲಿ ಇದು ಅತ್ಯಂತ ದೊಡ್ಡದಾಗಿದೆ.

ವಾರದ ಪ್ರಪಂಚ ಸಮೀಕ್ಷೆ

ದೇಶದಲ್ಲಿ ಎ.ಐ.ಟಿ.ಯು.ಸಿ. ಕಾರ್ಮಿಕರ ಮೊದಲ ಸಂಸ್ಥೆ

ಕೇಂದ್ರ ಸರಕಾರದ ಕಾರ್ಮಿಕ ಸಚಿವಾಲಯಕ್ಕೆ ಭಾರತದಲ್ಲಿರುವ ಕೇಂದ್ರ ಟ್ರೇಡ್ ಯೂನಿಯನ್ ಸಂಘಟನೆಗಳು ತಮ್ಮ ಸದಸ್ಯತ್ವದ ಬಗ್ಗೆ ಸಲ್ಲಿಸಿರುವ ಮಾಹಿತಿಯ ಪ್ರಕಾರ, ದೇಶದಲ್ಲಿ ಎ. ಐ. ಟಿ. ಯು. ಸಿ. ಕಾರ್ಮಿಕರ ಪ್ರಮುಖ ಬಹುಸಂಖ್ಯೆಯ ಸಂಸ್ಥೆಯಾಗಿದೆ ಎಂದು ತಿಳಿದು ಬಂದಿದೆ.

ಎ. ಐ. ಟಿ. ಯು. ಸಿ. ಸದಸ್ಯತ್ವವು 14,56,000ವಿದ್ದು, 1,427 ಕಾರ್ಮಿಕ ಸಂಘಗಳನ್ನು ಹೊಂದಿದೆ.

'ಇಂಟಕ್' ಸಲ್ಲಿಸಿರುವ ಅಂಕಿ ಅಂಶಗಳ ಪ್ರಕಾರ ಅದರ ಸದಸ್ಯತ್ವವು 14,03,000 ವಿದ್ದು 1,133 ಸಂಘಗಳನ್ನೊಳಗೊಂಡಿದೆ.

ಹಿಂದ್ ಮಜ್ದೂರ್ ಸಭಾದವರು ಕಳೆದ ವರ್ಷ ಸಲ್ಲಿಸಿದ ಅಂಕಿ ಅಂಶಗಳಂತೆ, ಸದಸ್ಯತ್ವವು 2,33,090 ಆಗಿತ್ತು.

ಕಳೆದ ವರ್ಷ 'ಇಂಟಕ್' ಸರಕಾರಕ್ಕೆ ಸಲ್ಲಿಸಿದ್ದ ಸದಸ್ಯತ್ವದ ಸಂಖ್ಯೆಯು 14,29,000 ಆಗಿತ್ತು. ಆದರೆ ಸರಕಾರವು ಪರಿಶೀಲನೆ ಮಾಡಿದ ನಂತರ ಅದರ ಸದಸ್ಯತ್ವ ಸಂಖ್ಯೆಯು 9,34,385 ಆಗಿತ್ತು. ಕಳೆದ ವರ್ಷ ಎ.ಐ.ಟಿ.ಯು.ಸಿ. ಯು ಸರಕಾರಕ್ಕೆ ಸದಸ್ಯತ್ವದ ಸಂಖ್ಯೆಯನ್ನು ಸಲ್ಲಿಸಿರಲಿಲ್ಲ. ಆದರೆ 1957ರಲ್ಲಿ ಎರ್ನಾಕುಲಂನಲ್ಲಿ ನಡೆದ ಅಧಿವೇಶನದಲ್ಲಿ ಸದಸ್ಯತ್ವವು 9,47,239 ಆಗಿದೆ ಎಂದು ಘೋಷಿಸಲಾಯಿತು.

ಎ. ಐ. ಟಿ ಯು. ಸಿ. ಕೇರಳ, ಮುಂಬಯಿ, ಮದರಾಸ್, ಬಂಗಾಳಗಳಲ್ಲಿ ಪ್ರಬಲವಾಗಿದೆ.

ಭಾರತದಲ್ಲಿರುವ ನಾಲ್ಕು ಕೇಂದ್ರ ಸಂಘಟನೆಗಳಾದ ಎ ಐ.ಟಿ.ಯು.ಸಿ, ಐ.ಎನ್.ಟಿ.ಯು.ಸಿ. ಎಚ್. ಎಂ. ಎಸ್. ಮತ್ತು ಯು.ಟಿ.ಯು.ಸಿ. ಗಳಲ್ಲಿ ಎ.ಐ.ಟಿ.ಯು.ಸಿ.ಯೇ ಬಹಳ ಹಳೆಯ ಸಂಸ್ಥೆ. 1920ರಲ್ಲಿ ಎ.ಐ ಟಿ.ಯು.ಸಿ. ಯು ಸ್ಥಾಪಿತವಾಯಿತು. ಎಲ್ಲ ರಾಜಕೀಯ ಅಭಿಪ್ರಾಯಗಳನ್ನು ಹೊಂದಿದವರೂ ಅದರಲ್ಲಿದ್ದರು. 1946 ರಲ್ಲಿ ಕಾಂಗ್ರೆಸ್ಸಿನವರು ಇಂಟಕ್ ಸ್ಥಾಪಿಸಿದರು ಮತ್ತು ಸೋಷಿಲಿಸ್ಟರು ಎಚ್.ಎಂ.ಎಸ್. ಸ್ಥಾಪಿಸಿದರು. ಇದರಿಂದಾಗಿ ಏಕೈಕ ಕಾರ್ಮಿಕ ಸಂಘಟನೆಯಲ್ಲಿ ಒಡಕುಂಟಾಯಿತು.

ಎ ಐ.ಟಿ.ಯು.ಸಿ ಇಂದು ದೇಶದಲ್ಲಿ ಕಾರ್ಮಿಕರ ನಡುವೆ ಪ್ರಧಾನ ಸಂಸ್ಥೆಯಾಗಿದೆ ಎಂಬುದು ಅಂಕಿ ಅಂಶಗಳಿಂದಲೇ ವ್ಯಕ್ತವಾಗುತ್ತದೆ. ಈ ಅಂಕಿ ಅಂಶಗಳು ಎ.ಐ.ಟಿ.ಯು ಸಿ.ಗೆ ಸೇರಿರುವ ಸಂಸ್ಥೆಗಳದ್ದು ಮಾತ್ರವಾಗಿದೆ. ನಿಜವಾಗಿ ಎ. ಐ. ಟಿ.ಯು.ಸಿ.ಯ ಪ್ರಭಾವ ಇದಕ್ಕಿಂತಲೂ ಹೆಚ್ಚಾಗಿದೆ.

ರೂರ್ಕೆಲಾ ಉಕ್ಕಿನ ಕಾರ್ಖಾನೆ ಕಂಟ್ರಾಕ್ಟ್ ಕೊಡುವುದರಲ್ಲಿ ಮೋಸ

ರೂರ್ಕೆಲಾ ಉಕ್ಕಿನ ಕಾರ್ಖಾನೆ ಸ್ಥಾಪನೆಯಲ್ಲಿ ಜರ್ಮನಿಯ ಕಂಪೆನಿಯೊಂದಕ್ಕೆ ಅಕ್ರಮವಾಗಿ ಕಂಟ್ರಾಕ್ಟು ಕೊಡಲಾಗಿರುವ ಪ್ರಶ್ನೆ ಪಾರ್ಲಿಮೆಂಟಿನ ಮುಂದೆ ಬರುವುದೆಂದು ತಿಳಿದುಬಂದಿದೆ. ರೋಲಿಂಗ್ ಮಿಲ್‌ಗಳಿಗಾಗಿ ಜರ್ಮನಿಯ ಕಂಪೆನಿಗೆ 7ಕೋಟಿ 78ಲಕ್ಷ ರೂಪಾಯಿಯ ಕಂಟ್ರಾಕ್ಟು ಕೊಡಲಾಗಿದೆ.

ಕಳೆದವಾರ ಪಾರ್ಲಿಮೆಂಟಿನಲ್ಲಿ ಪ್ರ. ಸ. ವಾ. ಪಕ್ಷದ ನಾಥ್‌ಪೈರವರ ಪ್ರಶ್ನೆಗೆ ಉತ್ತರಕೊಡುತ್ತಾ ಸಂಬಂಧಪಟ್ಟ ಸಚಿವರಾದ ಸ್ವರಣ್‌ಸಿಂಗ್‌ರವರು ತಮಗೆ ಈ ಬಗ್ಗೆ ಏನೂ ತಿಳಿಯದೆಂದು ತಿಳಿಸಿದರು. ಹಿಂದೂಸ್ತಾನ್ ಸ್ಟೀಲ್‌ನ ಡೈರಕ್ಟರ್‌ರವರು ಈ ಕಂಟ್ರಾಕ್ಟಿನ ಬಗ್ಗೆ ಆಕ್ಷೇಪವೆತ್ತಿರುವರೆಂದು ತಿಳಿದುಬಂದಿದೆ.

ರೂರ್ಕೆಲಾ ಉಕ್ಕಿನ ಕಾರ್ಖಾನೆ ಸಂಬಂಧದಲ್ಲಿ ಅತ್ಯಂತ ದೊಡ್ಡ ಕಂಟ್ರಾಕ್ಟ್ ಆಗಿರುವ ಇದನ್ನು ಟೆಂಡರುಗಳು ಕರೆಯದೆಯೇ ಕೊಡಲಾಗಿದೆಯೆಂದು ತಿಳಿದುಬಂದಿದೆ. ಅಲ್ಲದೆ ಡೈರಕ್ಟರುಗಳ ಅನುಮತಿ ಇಲ್ಲದೆಯೇ ಕಂಟ್ರಾಕ್ಟಿಗೆ ಸಹಿ ಹಾಕಲಾಗಿದೆ. ಸೆಪ್ಟಂಬರ್ 1957ರಲ್ಲಿ ಕಂಟ್ರಾಕ್ಟಿಗೆ ಸಹಿಯಾಗಿದ್ದರೂ, ಅದನ್ನು ಡೈರಕ್ಟರುಗಳ ಮುಂದೆ ಇರಿಸಿದ್ದು ಜನವರಿ 1958ರಲ್ಲಿ!

ಹಿಂದೂಸ್ತಾನ್ ಸ್ಟೀಲ್ (ರೂರ್ಕೆಲಾ)ನ ಆಡಳಿತೆಯ ಅಧ್ಯಕ್ಷರಾದ ಐ.ಸಿ.ಎಸ್. ಅಧಿಕಾರಿ ಎಸ್. ಭೂತಲಿಂಗಂರವರು ಈ ಅಕ್ರಮಕ್ಕೆ ಕಾರಣರಾಗಿರುವರೆಂದು ತಿಳಿದುಬಂದಿದೆ. ಅವರು. ಕೇಂದ್ರ ಸರಕಾರದ ಉಕ್ಕಿನ ಶಾಖೆ ಸಚಿವಾಲಯದ ಕಾರ್ಯದರ್ಶಿಯಾಗಿದ್ದು, ಸ್ವಂತ ಜವಾಬ್ದಾರಿಯ ಮೇಲೆ ಇದನ್ನು ಮಾಡಿರುವುದಾಗಿ ವ್ಯಕ್ತಗೊಂಡಿದೆ.

ತಜ್ಞರ ಅಭಿಪ್ರಾಯದಂತೆ ಈ ಕಂಟ್ರಾಕ್ಟು ಅಕ್ರಮವಾಗಿರುವುದಷ್ಟೇ ಅಲ್ಲದೆ ದುಬಾರಿಯಾದುದೂ ಆಗಿದೆ. ಉದಾಹರಣೆಗೆ ಭೂಮಿಯನ್ನು ಮಟ್ಟಗೊಳಿಸಲು ಬಳಸುವ ಯಂತ್ರಕ್ಕೆ ಒಂದು ವರ್ಷ ಕೆಲಸ ಮಾಡಲು ಈ ಕಂಪೆನಿಗೆ ಕೊಡುವ ಬಾಡಿಗೆಯ ಮೊತ್ತವು, ಯಂತ್ರದ ಬೆಲೆಯ ಶೇಕಡ 95ರಷ್ಟಾಗುತ್ತದೆ.

ಸಚಿವ ಸರದಾರ್ ಸ್ವರಣ್ ಸಿಂಗ್‌ರವರು ಲೋಕ ಸಭೆಯಲ್ಲಿ ಇತ್ತಿರುವ ವಿವರಣೆಯಂತೆ ಈ ಪಶ್ಚಿಮ ಜರ್ಮನ್ ಕಂಪೆನಿಗೆ ಯಂತ್ರಗಳು ಮತ್ತು ಕೂಲಿಗಾಗಿ 5.06 ಕೋಟಿ ರೂಪಾಯಿ, ಪ್ರದೇಶದ ಪರಿಶೀಲನೆ ಮತ್ತು ಯಂತ್ರಗಳಿಗಾಗಿ 1.57 ಕೋಟಿ ರೂಪಾಯಿ, ಕೇಂದ್ರ ಕಛೇರಿಯ ಖರ್ಚಿಗಾಗಿ 53ಲಕ್ಷ ರೂ ಮತ್ತು ಇತರೇ ಖರ್ಚಿಗಾಗಿ 62ಲಕ್ಷ ರೂ, ಹೀಗೆ ಒಟ್ಟು 7·78 ಕೋಟಿ ರೂ ಆಗಿದೆ.

ಈ ಕಂಟ್ರಾಕ್ಟಿನ ಹಿಂದೆ ಅಕ್ರಮ ಮತ್ತು ಮೋಸ ಅಡಗಿದೆ ಎಂಬುದರಲ್ಲಿ ಸಂದೇಹವೇ ಇಲ್ಲ. ಪಾರ್ಲಿಮೆಂಟಿನಲ್ಲಿ ಈಗಾಗಲೇ ಸದಸ್ಯರು ಈ ಪ್ರಶ್ನೆಯನ್ನು ಎತ್ತಿದ್ದಾರೆ. ಇಂಥ ದುರ್ವ್ಯಯದ ನಿದರ್ಶನಗಳು ಹೊಸತೇನಲ್ಲ. ಸರಕಾರ ಇಂಥ ಅಕ್ರಮಗಳ ಬಗ್ಗೆ ನಿರ್ಧಾರಕದ ಧೋರಣೆ ಅನುಸರಿಸದಿರುವುದು ಶೋಚನೀಯವಾಗಿದೆ. ಈ ಬಗ್ಗೆ ಸರಕಾರ ಏನು ಕ್ರಮ ತೆಗೆದುಕೊಳ್ಳುವುದೆಂಬುದನ್ನು ಕಾದು ನೋಡಬೇಕಿದೆ.

ಅಹಮದಾಬಾದಿನಲ್ಲಿ ಸ್ಮಾರಕ ಸತ್ಯಾಗ್ರಹ !

ಅಹಮದಾಬಾದ್‌ನ ಸ್ಮಾರಕ ಸತ್ಯಾಗ್ರಹ ಮುಂದುವರಿಯುತ್ತಿದ್ದು ಈವರೆಗೆ ಎಪ್ಪತ್ತೈದು ಮಂದಿಗೂ ಹೆಚ್ಚು ಬಂಧನಗಳಾಗಿವೆ. ಹುತಾತ್ಮರ ಸ್ಮಾರಕ ನಿರ್ಮಾಣದ ಬಗ್ಗೆ ಅನುಮತಿಯಿತ್ತ ಅಹಮದಾಬಾದ್ ನಗರ ಸಮಿತಿಯು ನಿರ್ಣಯ ಅನುಮೋದಿಸಿದ್ದರೂ, ಸರಕಾರ ಆಜ್ಞೆ ಹೊರಡಿಸಿ, ಕಾರ್ಪೊರೇಷನ್ನಿನ ನಿರ್ಣಯವನ್ನು ಮೂಲೆಗೊತ್ತಿದೆ. ಮುಂಬಯಿ ಸರಕಾರದ ಈ ಆಜ್ಞೆ ಕಾರ್ಪೊರೇಷನ್ನಿನ ಸ್ವಾಯತ್ತತೆಯನ್ನು ಅತಿಕ್ರಮಿಸುವುದಾಗಿದೆ. ಈಗಾಗಲೇ ಉದ್ರಿಕ್ತವಾಗಿರುವ ವಾತಾವರಣವನ್ನು ಮತ್ತಷ್ಟು ಹದಗೆಡಿಸುವುದಾಗಿದೆ.

ಸ್ಮಾರಕ ಚಳವಳಿಯನ್ನು ಇನ್ನಷ್ಟು ತೀವ್ರಗೊಳಿಸುವುದಾಗಿ ಮಹಾ ಗುಜರಾತ್ ಸಮಿತಿ ಘೋಷಿಸಿದೆ. ಸರಕಾರದ ಆಜ್ಞೆಯನ್ನು ಪ್ರತಿಭಟಿಸಲು, ಅಹಮ್ಮದಾಬಾದ್ ಕಾರ್ಪೊರೇಷನ್ನಿನ ನಾಗರಿಕ ಸಮಿತಿಯ ಸದಸ್ಯರುಗಳು, ಸಾಮೂಹಿಕವಾಗಿ ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಈಯಲು ಯೋಚಿಸುತ್ತಿದ್ದಾರೆ. ಇದು ಸರಕಾರದ ಅನೀತಿಯ ವಿರುದ್ಧ ಜನತೆಯ ಪ್ರತಿಭಟನೆಗೆ ಸೂಚಕವಾಗಿದೆ.

ಅಮೇರಿಕದ ಆರ್ಥಿಕ ಮುಗ್ಗಟ್ಟಿನ ಪರಿಣಾಮ !

ಅಮೆರಿಕದ ಆರ್ಥಿಕದಲ್ಲಿ ತಲೆದೋರಿರುವ ಮುಗ್ಗಟ್ಟಿನ ಪ್ರಭಾವ ಇಡೀ ಬಂಡವಾಳಶಾಹೀ ಜಗತ್ತಿನ ಮೇಲೆ ಆಗಿದೆ. ಅದರ ಬಿಸಿ ಭಾರತಕ್ಕೂ ತಟ್ಟದೇ ಇಲ್ಲ. ಈ ಆರ್ಥಿಕ ಮುಗ್ಗಟ್ಟಿನಿಂದಾಗಿ ಭಾರತ ವಿದೇಶೀ ವ್ಯಾಪಾರದಲ್ಲಿ ಡಾಲರ್‌ಗಳಿಕೆಯ ಪ್ರಮಾಣದಲ್ಲಿ ಭಾರೀ ನಷ್ಟವಾಗಿದೆ.

ಕಮ್ಯೂನಿಸ್ಟ್ ಸದಸ್ಯೆ ಶ್ರೀಮತಿ ಪಾರ್ವತಿಕೃಷ್ಣನ್‌ರವರು ಲೋಕಸಭೆಯಲ್ಲಿ ಹಾಕಿದ ಪ್ರಶ್ನೆಯೊಂದಕ್ಕೆ ಉತ್ತರ ಕೊಡುತ್ತ ಅರ್ಥಸಚಿವಾಲಯದ ಉಪ ಸಚಿವ ಶ್ರೀ ಡಿ. ಆರ್. ಭಗತ್‌ರವರು ಅಮೆರಿಕದ ಆರ್ಥಿಕ ಮುಗ್ಗಟ್ಟು ಭಾರತದ ಮೇಲೆ ಪರಿಣಾಮವುಂಟುಮಾಡಿರುವುದನ್ನು ಕುರಿತ ವಿವರಣೆ ಇತ್ತಿದ್ದಾರೆ. ಅದು ಈ ರೀತಿಯಿದೆ. ಜನವರಿ 1958ರಿಂದ ಮೇ ತಿಂಗಳವರೆಗೆ ಭಾರತದ ರಫ್ತು ವರಮಾನದ ಗಳಿಕೆಯಲ್ಲಿ, ಕಳೆದ ವರ್ಷ (1957) ಕ್ಕೆ ಹೋಲಿಸಿದಲ್ಲಿ 28 ಕೋಟಿ ರೂ. ಕಡಿಮೆಯಾಗಿತ್ತು. ಆರ್ಥಿಕ ಮುಗ್ಗಟ್ಟಿನಿಂದಾಗಿ ಭಾರತಕ್ಕೆ ತುಂಬಾ ತೊಡಕಾಗಿದೆ. ಮ್ಯಾಂಗನೀಸ್ ಅದುರು, ಮೆಣಸು ಇತ್ಯಾದಿ ಪದಾರ್ಥಗಳ ರಫ್ತಿಗೆ ತೊಂದರೆ ಆಗಿದೆ ಎಂದು ತಿಳಿಸಿದ್ದಾರೆ.

ಪಶ್ಚಿಮ ಏಷ್ಯ ಬಿಕ್ಕಟ್ಟಿನ ಪರಿಹಾರ

ವಿಶ್ವಸಂಸ್ಥೆಯ ಮಹಾ ಸಭೆಯು ತುರ್ತು ಅಧಿವೇಶನದಲ್ಲಿ ಅರಬ್ ರಾಷ್ಟ್ರಗಳು ಸಂಯುಕ್ತವಾಗಿ ಮಂಡಿಸಿದ ನಾಲ್ಕು ಅಂಶಗಳ ಯೋಜನೆಯನ್ನು ಅಧಿವೇಶನವು ಅನುಮೋದಿಸಿದ್ದರಿಂದಾಗಿ ಪಶ್ಚಿಮ ಏಷ್ಯದಲ್ಲಿನ ಬಿಕ್ಕಟ್ಟು ಪರಿಹಾರವಾದಂತಾಗಿದೆ.

ಇರಾಕ್‌ನಲ್ಲಿ ಕ್ರಾಂತಿಯಾದ ನಂತರದಲ್ಲಿ ಲೆಬನಾನ್ ಮತ್ತು ಜೋರ್ಡಾನುಗಳಲ್ಲಿ ಅಮೆರಿಕನ್ ಮತ್ತು ಬ್ರಿಟಿಷ್ ಪಡೆಗಳು ಬಂದಿಳಿದು ವಿಶ್ವವನ್ನು ಮಹಾ ಯುದ್ಧದ ಕಾರ್ಮೋಡದಲ್ಲಿ ಸಿಕ್ಕಿಸಿದ್ದಿತು. ಸೂಯೇಜ್‌ನ ಆಕ್ರಮಣವಾದ ನಂತರದಲ್ಲಿ ಮಧ್ಯಪ್ರಾಚ್ಯ (ಪಶ್ಚಿಮ ಏಷ್ಯ) ದಲ್ಲಿ ಸಾಮ್ರಾಜ್ಯಶಾಹಿ ತನ್ನ ಆಕ್ರಮಣಕಾರೀ ನೀತಿಯನ್ನು ಮುಂದುವರಿಸಿದ್ದು ಎರಡನೆಯ ಬಾರಿಯಾಗಿತ್ತು.

ಸೋವಿಯತ್ ಯೂನಿಯನ್, ಯುನೈಟೆಡ್ ಅರಬ್ ರಿಪಬ್ಲಿಕ್, ಭಾರತ ಮೊದಲಾದ ಶಾಂತಿ ಪ್ರೇಮಿ ರಾಷ್ಟ್ರಗಳ ಸಮಯೋಚಿತವಾದ ಕರ್ತವ್ಯದ ಪರಿಣಾಮವಾಗಿ ಮಹಾ ಯುದ್ಧದ ಭೀತಿ ತಪ್ಪಿತು. ಪಶ್ಚಿಮ ಏಷ್ಯದ ಬಿಕ್ಕಟ್ಟು ಪರಿಹಾರವಾದುದು ಶಾಂತಿ ಪ್ರೇಮಿಗಳಿಗೆ ದೊರೆತ ಅದ್ಭುತ ವಿಜಯವಾಗಿದೆ.

ವಿಶ್ವ ಸಂಸ್ಥೆಯ ಮಹಾಸಭೆಯ ಮೂಲಕವಾಗಿ ಸಮಸ್ಯೆಯು ಪರಿಹಾರವಾಗಿರುವುದು, ವಿಶ್ವಸಂಸ್ಥೆಯ ಗೌರವವನ್ನು ಹೆಚ್ಚಿಸಿದೆ. ಅರಬ್ ರಾಷ್ಟ್ರಗಳು ಸಂಯುಕ್ತವಾಗಿ ಸಲಹೆಯನ್ನು ಮಂಡಿಸಿ ಸರ್ವಾನುಮತದಿಂದ ಅನುಮೋದಿತವಾದುದೂ ಅರಬ್ ರಾಷ್ಟ್ರೀಯತೆಗೆ ದೊರೆತ ಮಹತ್ವವಾದ ವಿಜಯವಾಗಿದೆ. ಆದರೆ ಪಶ್ಚಿಮ ಏಷ್ಯದಲ್ಲಿ ಶಾಶ್ವತ ಶಾಂತಿ ಸ್ಥಾಪನೆ ಇನ್ನೂ ದೂರವಿದೆ. ಅದಕ್ಕಾಗಿ ಶಾಂತಿ ಶಕ್ತಿಗಳು ಶ್ರಮಿಸಬೇಕಿದೆ.

ಬ್ರಿಟೀಷ್ ಮತ್ತು ಅಮೇರಿಕನ್ ಪಡೆಗಳು ಜೋರ್ಡಾನ್ ಲೆಬನಾನ್‌ಗಳಿಂದ ಸೆಪ್ಟಂಬರ್ ಮಾಸದ ಅತ್ಯದೊಳಗೆ ಸಂಪೂರ್ಣವಾಗಿ ವಾಪಸಾಗುವ ನಿರೀಕ್ಷೆ ಇದೆ. ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾಗ್ ಹ್ಯಾಮರ್ ಷೀಲ್ಡ್‌ರವರು ಮಹಾಸಭೆಯ ನಿರ್ಣಯವನ್ನು ಕಾರ್ಯಗತಗೊಳಿಸಲು, ಈಗಾಗಲೇ ಕ್ರಮ ತೆಗೆದುಕೊಂಡಿದ್ದಾರೆ.

ಜಿನೀವಾದಲ್ಲಿ ಕಳೆದ ತಿಂಗಳಿಂದಲೂ ನಡೆಯುತ್ತಿದ್ದ ನ್ಯೂಕ್ಲಿಯರ್ ಶಸ್ತ್ರಾಸ್ತ್ರ ಪ್ರಯೋಗಗಳ ಪರೀಕ್ಷಾರ್ಥ ಸಮ್ಮೇಳನವು ಯಶಸ್ವಿಯಾಗಿ ಮುಕ್ತಾಯಗೊಂಡಿದೆ. ಪೂರ್ವ ಪಶ್ಚಿಮ ರಾಷ್ಟ್ರಗಳ ವಿಜ್ಞಾನಿಗಳು ನ್ಯೂಕ್ಲಿಯರ್ ಶಸ್ತ್ರಗಳ ಆಸ್ಫೋಟನೆಯನ್ನು ಕಂಡುಹಿಡಿಯುವ ಮತ್ತು ಅವುಗಳ

[೯ನೇ ಪುಟ ನೋಡಿ]

ಲೋಕ ಸಭೆಯಲ್ಲಿ ಕಳೆದ ವಾರ

ವಿದೇಶಾಂಗ ವ್ಯವಹಾರದ ಕುರಿತು

ಭಾರತದ ವಿದೇಶಾಂಗ ನೀತಿಯ ಬಗ್ಗೆ ನಡೆದ ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರುಗಳು ಸಾಮಾನ್ಯವಾಗಿ ಸರಕಾರದ ನೀತಿಗೆ ಬೆಂಬಲವಿತ್ತರು. ಪಶ್ಚಿಮ ಏಷ್ಯದಲ್ಲಿ ಅಮೆರಿಕ ಮತ್ತು ಬ್ರಿಟನ್ನಿನ ಸೇನೆಗಳ ಪ್ರವೇಶವನ್ನು ಖಂಡಿಸಿ, ಕೂಡಲೇ ಅವು ಅಲ್ಲಿಂದ ಕಾಲ್ತೆಗೆಯಬೇಕೆಂದು ಸದಸ್ಯರು ಮಾತನಾಡುತ್ತ ತಿಳಿಸಿದರು.

ಪ್ರಧಾನ ಮಂತ್ರಿ ನೆಹರೂರವರು ಚರ್ಚೆಗೆ ಉತ್ತರ ಕೊಡುತ್ತ ಭಾರತ ಸರಕಾರವು ಲೆಬನಾನ್ ಜೋರ್ಡಾನುಗಳಿಂದ ವಿದೇಶೀ ಸೇನೆಗಳು ವಾಪಸಾಗಬೇಕೆಂದು ಒತ್ತಾಯ ಪಡಿಸುವುದೆಂದು ತಿಳಿಸಿದರು.

ಕಮ್ಯೂನಿಸ್ಟ್ ಪಕ್ಷದ ನಾಯಕರಾದ ಎ. ಕೆ. ಗೋಪಾಲನ್‌ರವರು ಮಾತನಾಡುತ್ತ ಅಮೆರಿಕ ಮತ್ತು ಬ್ರಿಟನ್ನಿನ ಸಾಮ್ರಾಜ್ಯವಾದೀ ಆಕ್ರಮಣಕಾರೀ ನೀತಿಯನ್ನು ವಿವರಿಸಿ, ಇಂಥ ಆಕ್ರಮಣಕಾರೀ ನೀತಿಗಳ ಎದುರಿನಲ್ಲಿ ಎಚ್ಚರದಿಂದಿರಬೇಕೆಂದು ತಿಳಿಸಿದರು. ಸಾಮಾನ್ಯವಾಗಿ ಸರಕಾರದ ವಿದೇಶಾಂಗ ನೀತಿಗೆ ಬೆಂಬಲವೀಯುತ್ತ, ಇನ್ನೂ ಅನೇಕ ವಿಷಯಗಳ ಮೇಲೆ ಸರಕಾರವು ದೃಢವಾದ ನೀತಿ ಅನುಸರಿಸುವುದಗತ್ಯ ಎಂದು ತಿಳಿಸಿದರು

ಅನೇಕ ಕಾಂಗ್ರೆಸ್ ಸದಸ್ಯರುಗಳೂ, ಕಾಲಿಕಾಸಿಂಗ್, ಜೋಕಿಂಆಳ್ವ ಮತ್ತಿತರರು ಲೆಬನಾನ್ ಜೋರ್ಡಾನುಗಳಲ್ಲಿ ವಿದೇಶೀ ಸೇನೆಗಳಿರುವುದು ಭಾರತಕ್ಕೂ ಆಪತ್ತೆಂದು ತಿಳಿಸಿದರು. ಪಶ್ಚಿಮ ಏಷ್ಯದಲ್ಲಿ ಪ್ರವೇಶಿಸಿರುವ ಸಾಮ್ರಾಜ್ಯವಾದಿಗಳು ಮೂರು ಮುಖ್ಯ ಅಂಶಗಳನ್ನು ಅಂದರೆ ರಷ್ಯ, ಚೀಣ ಮತ್ತು ಅರಬ್ ಕ್ರಾಂತಿಯನ್ನು ತೃಣೀಕರಿಸಿವೆ ಎಂದು ತಿಳಿಸಿದರು.

ಎಲ್ಲ ಸದಸ್ಯರೂ ಸಹ ಸಿಂಗಪುರದಲ್ಲಿ ಅಮೆರಿಕದ ನೌಕಾ ಪಡೆಗಳು ಬಂದಿಳಿದಿರುವುದನ್ನು ಪ್ರಸ್ತಾಪಿಸಿ, ಅದು ಭಾರತದ ಭದ್ರತೆಗೆ ಆಪತ್ತಾಗಿದೆ ಎಂದು ತಿಳಿಸಿದರು.

ಸದಸ್ಯರುಗಳು ಮತ್ತೊಂದು ಬಾಂಡುಂಗ್ ಮಾದರಿಯ ಏಷ್ಯಾ—ಆಫ್ರಿಕಾ ಸಮ್ಮೇಳನವನ್ನು ಕರೆಯುವುದರ ಅಗತ್ಯತೆಯನ್ನು ಒತ್ತಿ ಹೇಳಿದರು.

ಪ್ರಜಾ ಸೋಷಿಲಿಸ್ಟ್ ನಾಯಕರಾದ ಆಚಾರ್ಯ ಕೃಪಲಾನಿಯವರು ಮಾತ್ರ ಶೃಂಗ ಸಮ್ಮೇಳನದ ಬಗ್ಗೆ ಅಮೆರಿಕ-ಬ್ರಿಟನ್ನಿನ ನಿಲುವೆಯನ್ನು ಎತ್ತಿ ಹಿಡಿದರು. ಅಲ್ಲದೆ ಅವರು ಚೀಣದ ವಿರುದ್ಧವಾಗಿ ಇಲ್ಲದ ಅಪವಾದಗಳನ್ನು ಹೊರಿಸಿದರು. ಟಿಬೆಟ್ಟಿನ ಮೇಲೆ ಚೀಣದ ಸಾರ್ವಭೌಮತ್ವವನ್ನು ಪ್ರಶ್ನಿಸಿದರು. ಪಂಡಿತ ನೆಹರೂರವರು ಈ ಟೀಕೆಗೆ ಉತ್ತರವೀಯುತ್ತ ಟಿಬೆಟ್ಟಿನ ಮೇಲೆ ಚೀಣದ ಸಾರ್ವಭೌಮತ್ವವನ್ನು ವಿಶ್ವವೇ ಒಪ್ಪಿಕೊಂಡಿದೆ ಎಂದು ತಿಳಿಸಿದರು.

ಆಹಾರ ಪರಿಸ್ಥಿತಿಯ ಮೇಲೆ

ದೇಶದ ಆಹಾರ ಪರಿಸ್ಥಿತಿಯ ಬಗ್ಗೆ ನಡೆದ ಚರ್ಚೆಯಲ್ಲಿ 40ಕ್ಕೂ ಹೆಚ್ಚು ಮಂದಿ ಸದಸ್ಯರು ಭಾಗವಹಿಸಿದ್ದರು. ಎರಡು ದಿನಗಳು ನಡೆದ ಚರ್ಚೆಯಲ್ಲಿ ಸದಸ್ಯರು ಆಹಾರದ ಪರಿಸ್ಥಿತಿ ಉಲ್ಬಣಗೊಂಡಿರುವುದನ್ನು, ಬೆಲೆ ವಿಪರೀತವಾಗಿ ಏರಿರುವುದನ್ನು ಸರಕಾರದ ಗಮನಕ್ಕೆ ತಂದ, ಸರಕಾರದ ಆಹಾರ ನೀತಿಯನ್ನು ಕಟುವಾಗಿ ಟೀಕಿಸಿದರು ಉತ್ತರಪ್ರದೇಶ, ಬಿಹಾರ್, ಪಶ್ಚಿಮ ಬಂಗಾಳ, ರಾಜಾಸ್ಥಾನ, ಮಧ್ಯ ಪ್ರದೇಶ ಮತ್ತು ಒರಿಸ್ಸಾಗಳಲ್ಲಿ ಆಹಾರ ಪರಿಸ್ಥಿತಿಯು ತೀವ್ರಗೊಂಡಿರುವುದನ್ನು ವ್ಯಕ್ತಪಡಿಸಿ ಕೂಡಲೇ ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಪಡಿಸಲಾಯಿತು ಅಷ್ಟೇ ಅಲ್ಲದೆ ಸರಿಯಾಗಿ ಮಳೆಯಾಗದುದರಿಂದಾಗಿ ಪರಿಸ್ಥಿತಿ ಇನ್ನಷ್ಟು ತೀವ್ರಗೊಂಡಿರುವುದನ್ನು ಸದಸ್ಯರು ಸರಕಾರದ ಗಮನಕ್ಕೆ ತಂದರು.

ಆಹಾರ ಸಚಿವ ಎ. ಪಿ. ಜೈನ್‌ರವರು ಮಾತನಾಡುತ್ತ ಪರಿಸ್ಥಿತಿಯನ್ನು ಕುರಿತು ಇತ್ತಿರುವ ವಿವರಣೆಯಲ್ಲಿ, 1957–58ರ ಸಾಲಿನಲ್ಲಿ ಆಹಾರ ಉತ್ಪಾದನೆಯು 68·7 ಮಿಲಿಯ ಟನ್‌ಗಳಾಗಿದ್ದು ಕಳೆದ ವರ್ಷದ ಉತ್ಪಾದನೆಗಿಂತಲೂ ಶೇಕಡ 9·8 ರಷ್ಟು ಕಡಿಮೆಯಾಗಿದೆಯೆಂದೂ ತಿಳಿಸಿದ್ದಾರೆ. ಈ ವರ್ಷದಲ್ಲಿ ಅಕ್ಕಿ ಉತ್ಪಾದನೆಯು ಶೇಕಡ 12·2 ರಷ್ಟು, ಗೋಧಿ ಉತ್ಪಾದನೆಯು ಶೇಕಡ 17·8ರಷ್ಟು ಕಡಿಮೆಯಾಗಿದೆ ಎಂದು ಹೇಳಿದ್ದಾರೆ.

ಉತ್ಪಾದನೆಯಲ್ಲಿ ಈ ಇಳುವರಿಯಿಂದಾಗಿ ಭಾರತವು ಈಗಾಗಲೇ 1,862,000 ಟನ್ ಧಾನ್ಯವನ್ನು ಈ ವರ್ಷ ಆಮದು ಮಾಡಿಕೊಂಡಿದೆಯೆಂದು ತಿಳಿಸಿದರು 1957ರಲ್ಲಿ ಆಮದು ಮಾಡಿಕೊಂಡ ಆಹಾರ ಧಾನ್ಯವು 3,582,000 ಟನ್‌ಗಳಾಗಿತ್ತೆಂದೂ ಮತ್ತು 1956ರಲ್ಲಿ 1·42 ಮಿಲಿಯ ಟನ್‌ಗಳಾಗಿತ್ತೆಂದೂ ತಿಳಿಸಿದ್ದಾರೆ. ಆಹಾರ ಧಾನ್ಯದ ಈ ಕೊರತೆಯಿಂದಾಗಿ ಬೆಲೆಗಳೂ ಹೆಚ್ಚಿವೆಯೆಂದು ತಿಳಿಸಿದ್ದಾರೆ.

ಪಾರ್ಲಿಮೆಂಟಿನಲ್ಲಿ ನಡೆದ ಚರ್ಚೆಯಲ್ಲಿ, ಆಹಾರ ಉತ್ಪಾದನೆಯಲ್ಲಾಗಿರುವ ಇಳುವರಿಯ ಬಗ್ಗೆ ಕಳವಳವನ್ನು ವ್ಯಕ್ತಗೊಳಿಸಿದರು. ನೀರಾವರೀ ಸೌಕರ್ಯ ಸರಿಯಾಗಿಲ್ಲದಿರುವುದನ್ನು ಮತ್ತು ಭೂಸುಧಾರಣೆಯು ಆಗದಿರುವುದನ್ನೂ ಕುರಿತು ವಿವರಣೆಯಿತ್ತು, ಈ ದುರವಸ್ಥೆಗೆ ಸರಕಾರದ ನಿಧಾನ ನೀತಿಯೇ ಕಾರಣವೆಂದು ಸದಸ್ಯರು ಟೀಕಿಸಿದರು. ಶೀಘ್ರವಾಗಿ ಭೂಸುಧಾರಣೆಯನ್ನು ಜಾರಿಗೆ ತರಲು ಕ್ರಮ ತೆಗೆದುಕೊಳ್ಳಬೇಕೆಂದೂ, ಪ್ರಸ್ತುತ ಪರಿಸ್ಥಿತಿಯನ್ನು ಸುಧಾರಿಸಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದೂ ತಿಳಿಸಲಾಯಿತು.

ಪರಿಸ್ಥಿತಿಯನ್ನು ಇದಿಂಸಲು ಸಣ್ಣ ಮತ್ತು ಮಧ್ಯಮ ನೀರಾವರೀ ಸೌಲಭ್ಯಗಳಿಗಾಗಿ ಸರಕಾರವು ಹೆಚ್ಚು ಹಣವನ್ನು ವಿನಿಯೋಗಿಸಲಾಗುವುದೆಂದೂ, 41,000 ಕ್ಕೂ ಹೆಚ್ಚಾಗಿ ಅಗ್ಗದ ಬೆಲೆ ಅಂಗಡಿಗಳನ್ನು ತೆರೆಯಲಾಗುವುದೆಂದೂ, ಕೊರತಾ ಪ್ರದೇಶಗಳಿಗೆ ಸರಬರಾಜು ಮಾಡಲು ಕೇಂದ್ರದಿಂದ ವ್ಯವಸ್ಥೆ ಮಾಡಲಾಗುವುದೆಂದೂ ಮತ್ತು ಬೆಲೆ ಏರಿಕೆಯನ್ನು ತಡೆಯಲು ಕ್ರಮ ತೆಗೆದುಕೊಳ್ಳಲಾಗುವುದೆಂದೂ ಆಹಾರ ಸಚಿವರು ಸದಸ್ಯರ ಟೀಕೆಗೆ ಉತ್ತರವಾಗಿ ತಿಳಿಸಿದ್ದಾರೆ.

ದೆಹಲಿಯಲ್ಲಿ ಜಮುನಾ ನದಿಯ ಪ್ರವಾಹದಿಂದಾಗಿ ಕುಡಿಯುವ ನೀರು ಸರಬರಾಜಿನ ಪೈಪು ಜಖಂ ಆಗಿ, ರಾಜಧಾನಿಯಲ್ಲಿ ನೀರಿನ ಅಭಾವ ಏರ್ಪಟ್ಟದ್ದರ ಬಗ್ಗೆ ನಿಲುವಳಿ ಸೂಚನೆಯೊಂದು ಸಭೆಯಲ್ಲಿ ಚರ್ಚೆಯಾಯಿತು. ನೀರು ಸರಬರಾಜು ಹಠಾತ್ತಾಗಿ ನಿಲ್ಲುವುದಕ್ಕೆ ಸರಕಾರದ ಅನಾದರಣೆ ನೀತಿಯೇ ಕಾರಣವೆಂದು ಉಗ್ರವಾಗಿ ಟೀಕಿಸಲಾಯಿತು. ಪ್ರಥಮ ಬಾರಿಗೆ ಖಾಸಗೀ ಸದಸ್ಯ ನಿಲುವಳಿ ಸೂಚನೆಯು ಈ ಬಗ್ಗೆ ಸಭೆಯಲ್ಲಿ ಅಂಗೀಕೃತವಾಗಿ ಚರ್ಚೆಗೆ ಬಂದಿದ್ದಿತು.

ಪತ್ರಕರ್ತರ ವೇತನ ಸಮಿತಿಯ ಬಗ್ಗೆ ಚರ್ಚೆ ನಡೆದು, ಸರ್ವಾನುಮತ ಬೆಂಬಲವು ಮಸೂದೆಗೆ ದೊರಕಿತು. ಕೆಲ ಸದಸ್ಯರು ಕೈಗಾರಿಕಾ ವಿವಾದ ವಿಷಯದಲ್ಲಿ ಸುಪ್ರೀಂ ಕೋರ್ಟಿನ ಅಧಿಕಾರವನ್ನು ತಪ್ಪಿಸಬೇಕೆಂದು ಸೂಚಿಸಿದರು.

—ವೀಕ್ಷಕ

ಭದ್ರಾವತಿ ಕಾಗದ ಕಾರ್ಖಾನೆ ಕೆಲಸಗಾರರಿಂದ ಪಾರ್ಟಿಗೆ ಧನಸಹಾಯ

ಭದ್ರಾವತಿ ಕಾಗದ ಕಾರ್ಖಾನೆಯ ಕೆಲಸಗಾರರಿಗೆ ಈ ವರ್ಷದ ಬೋನಸ್ಸು ಹಂಚಿದ ಸಮಯದಲ್ಲಿ ಕಮ್ಯೂನಿಸ್ಟ್ ಪಾರ್ಟಿ ಧನಸಹಾಯಕ್ಕೆ ಕರೆ ಕೊಟ್ಟದ್ದಿತು. ಅದೇ ಪ್ರಕಾರ ಸುಮಾರು ರೂ. 70ನ್ನು ಕೂಲಿಗಾರರು ವಸೂಲು ಮಾಡಿಕೊಟ್ಟರು. ಅದರಲ್ಲಿ ಶ್ರೀ ತಿಮ್ಮಯ್ಯನವರ ಕಾಣಿಕೆ ರೂ. 5—0—0.

ಪಾವಗಡದಲ್ಲಿ ಪಾರ್ಟಿ ಕಛೇರಿ ಸ್ಥಾಪನೆ

ತಾ. 12—8—58ರಂದು ಪಾವಗಡದಲ್ಲಿ ಭಾರತ ಕಮ್ಯೂನಿಸ್ಟ್ ಪಾರ್ಟಿಯ ಶಾಖಾ ಕಛೇರಿಯನ್ನು ಸ್ಥಾಪಿಸಲಾಯಿತಲ್ಲದೆ ಧ್ವಜ ಪ್ರತಿಷ್ಠಾಪನೆಯನ್ನೂ ಮಾಡಲಾಯಿತು.

ಈ ಸಂಬಂಧದಲ್ಲಿ ಹೊರಟದ್ದ ಮೆರವಣಿಗೆಯಲ್ಲಿ ಸುಮಾರು ೨೦೦ ಜನ ರೈತರು ಭಾಗವಹಿಸಿದ್ದರು. "ಕಮ್ಯೂನಿಸ್ಟ್ ಪಾರ್ಟಿ ಚಿರಾಯುವಾಗಲಿ"! ಎಂಬ ಘೋಷಣೆಗಳು ಮೊಳಗುತ್ತಿದ್ದವು.

ಕಾಂ| ಆರ್. ಶಂಕರನಾರಾಯಣ ರಾವ್‌ರವರಿಂದ ಧ್ವಜಸ್ಥಾಪನೆಯಾಯಿತು. ಸಾಯಂಕಾಲ ಬಸ್‌ಸ್ಟ್ಯಾಂಡಿನಲ್ಲಿ ಭಾರೀ ಬಹಿರಂಗ ಸಭೆಯು ಅವರ ಅಧ್ಯಕ್ಷತೆಯಲ್ಲೇ ನಡೆದು, ಆಂಧ್ರದಿಂದ ವಿಶೇಷ ಆಮಂತ್ರಣದ ಮೇರೆಗೆ ಬಂದಿದ್ದ ಕಾಂ| ಬಿ. ಟಿ. ರಾಮಯ್ಯ ಮತ್ತು ಕಾಂ| ಶರ್ಮ ಅವರುಗಳು ರಾಜಕೀಯ ಪರಿಸ್ಥಿತಿಯನ್ನು ವಿಮರ್ಶಿಸಿ ಧ್ವಜದ ಅರ್ಥವನ್ನು ಹೇಳಿದರು.

ರಾತ್ರಿ ಮೆರವಣಿಗೆಯನ್ನು ಹೊರಡಿಸಲಾಗಿತ್ತು.

ಸ್ವಲ್ಪದರಲ್ಲಿ ಸುದ್ದಿ

ಮೇಡಂ ಕೋಟ್ನೀಸ್‌ರವರಿಗೆ ಬೆಳಗಾಂನಲ್ಲಿ ಸತ್ಕಾರ

ಡಾ| ಕೋಟ್ನೀಸ್ ಅವರ ಪತ್ನಿಯವರು ತಮ್ಮ ಸಂಬಂಧಿಕರಿಗೆ ಭೆಟ್ಟಿಯಾಗಲು ದಿ. ೧೭ರಂದು ಜನತಾ ಟ್ರೈನಿನಿಂದ ಬೆಳಗಾಂವಿಗೆ ಆಗಮಿಸಿದ್ದರು. ನಿಲ್ದಾಣದಲ್ಲಿ ಅವರಿಗೆ ಭವ್ಯ ಸ್ವಾಗತ ನೀಡಲಾಯಿತು. ಅದೇ ದಿನ ಸಂಜೆಗೆ ಇಲ್ಲಿಯ ಹಳೇ ನಗರಸಭೆಯಲ್ಲಿ ಹಾಗೂ ಜಿಲ್ಲಾ ಕಾಂಗ್ರೆಸ್ ಸಮಿತಿಯಲ್ಲಿ ಅವರಿಗೆ ಸ್ವಾಗತ ನೀಡಲಾಯಿತು. ದಿ. ೧೮ರಂದು ಅವರು ಇಲ್ಲಿಯ ಕಿಂಗ್‌ಜಾರ್ಜ್ ಹೈಸ್ಕೂಲಿಗೆ ಭೇಟಿ ಕೊಟ್ಟರು. ಅವರು ಅಲ್ಲಿಯ ವಿದ್ಯಾರ್ಥಿಗಳನ್ನುದ್ದೇಶಿಸಿ—"ನಾನು ಭಾರತಕ್ಕೆ ಬಂದದ್ದು ಇದೇ ಮೊದಲನೆ ಸಲ. ಇಲ್ಲಿ ಸಾಂಸ್ಕೃತಿಕ ಮತ್ತು ಆರ್ಥಿಕ ಕ್ಷೇತ್ರದಲ್ಲಾದ ಪ್ರಗತಿಯನ್ನು ಕಂಡು ನನಗೆ ಸಂತೋಷವಾಗಿದೆ" ಎಂದು ಹೇಳಿದರು. ವಿದ್ಯಾರ್ಥಿಗಳು—"ಹಿಂದೀ-ಚೀನೀ ಭಾಯಿ-ಭಾಯಿ" ಎಂದು ಘೋಷಣೆ ಮಾಡಿದರು. ಲೇಡೀಸ್ ಕ್ಲಬ್ಬಿಗೆ ಭೇಟಿ ಕೊಟ್ಟು ಸಂಜೆಯ ಮೇಲಿನಿಂದ ಅವರು ಪುಣಾಕ್ಕೆ ತೆರಳಿದರು. ಅವರ ಸಂಗಡ ಅವರ ಮಗ ಹಾಗೂ ಕೊಟ್ನೀಸರ ತಮ್ಮ ಮಂಗೇಶ ಅವರು ಇದ್ದರು. ನಿಲ್ದಾಣದಲ್ಲಿ ಅವರನ್ನು ಬೀಳ್ಕೊಡಲು ಬಂದ ಪ್ರಚಂಡ ಜನಸಮುದಾಯವು "ಹಿಂದೀ ಚೀನೀ—ಭಾಯಿ—ಭಾಯಿ" ಎಂದು ಘೋಷಿಸುತ್ತಿತ್ತು.

೦ ೦ ೦

ಮೇಡಂ ಕುವೊ ಚಿನ್ ಲಾನ್ ಅವರಿಗೆ ಶೋಲಾಪೂರ ನಗರಸಭೆಯು ೨೦—೮—೫೮ರಂದು ಸತ್ಕಾರವನ್ನೇರ್ಪಡಿಸಿ ಗೌರವಿಸಿತು. ಡಾ|| ಕೋಟ್ನೀಸ್‌ರು ಮೂಲ ಶೋಲಾಪೂರಿನವರು. ಇದೇ ಕಾಲಕ್ಕೆ ಇಲ್ಲಿಯ ಉಪವನವೊಂದಕ್ಕೆ ಡಾ|| ಕೋಟ್ನೀಸರ ಹೆಸರನ್ನಿಡಲಾಯಿತು. ಚೀನಾದ ಷಿಯಾ ಶೂಂಗ್ ನಗರದಲ್ಲೂ ಕೋಟ್ನೀಸರ ಸ್ಮಾರಕವನ್ನು ನಿಲ್ಲಿಸಲಾಗಿದೆ.

ಶ್ರೀಮತಿ ಕೋಟ್ನೀಸ್ ಚೀನಾದಲ್ಲಿ ಡಾಲ್‌ರೆನ್ ನಗರದಲ್ಲಿಯ ಮಕ್ಕಳ ಆಸ್ಪತ್ರೆಯಲ್ಲಿ ಡಾಕ್ಟರರಾಗಿದ್ದಾರೆ. ಭಾರತದಲ್ಲಿ ಒಂದು ವಾರದ ಬಳಿಕ ಶ್ರೀಮತಿ ಕೋಟ್ನೀಸ್ ಇದೇ ೨೯ರಂದು ಚೀನಾಕ್ಕೆ ವಾಪಸಾಗುತ್ತಾರೆ.

ನಾಡಿಯಾ ಸಾಲ್ಬಿಯನ್ನು ರಕ್ಷಿಸಿರಿ !

ಪಾರ್ಲಿಮೆಂಟಿನ ಮೂವರು ಕಮ್ಯೂನಿಸ್ಟ್ ಸದಸ್ಯರುಗಳು ಪ್ರಧಾನಿ ನೆಹ್ರೂರವರಿಗೆ ಒತ್ತಾಯ ಹಾಕುತ್ತ ಬ್ರಿಟಿಷ್ ಸರ್ಕಾರವು ಜೋರ್ಡಾನಿನ ೨೦ ವರುಷದ ಯುವತಿ ನಾಡಿಯಾ ಸಾಲ್ಬಿ ಮತ್ತು ಇನ್ನೂ ನಾಲ್ಕು ಜನ ವಿದ್ಯಾರ್ಥಿಗಳಿಗೆ ವಿಧಿಸಿರುವ ಗಲ್ಲು ಶಿಕ್ಷೆಯ ವಿಚಾರದಲ್ಲಿ ಪ್ರವೇಶಿಸಿ ಇವರನ್ನು ರಕ್ಷಿಸಬೇಕೆಂದು ಕೇಳಿಕೊಂಡಿದ್ದಾರೆ.

ನೆಹ್ರೂರರಿಗೆ ಕಳಿಸಲಾದ ಈ ಪತ್ರಕ್ಕೆ ಶ್ರೀಮತಿ ರೇಣು ಚಕ್ರವರ್ತಿ, ಶ್ರೀಮತಿ ಪಾರ್ವತಿ ಕೃಷ್ಣ ಮತ್ತು ಶ್ರೀ ಭೂಪೇಶ ಗುಪ್ತ ಅವರುಗಳು ಸಹಿ ಹಾಕಿದ್ದಾರೆ.

ಎಳೆಯ ಬುದ್ಧಿ

ಗೊಂಡಾಲ್ ಎಂಬುದು ಸೌರಾಷ್ಟ್ರದಲ್ಲಿಯ ಒಂದು ಪಟ್ಟಣ. ಅಲ್ಲಿಯ ಸುಮಾರು ೧೦ ಅಥವಾ ೧೨ ವರುಷದ ಎಳೆಯ ಕುಮಾರಿಯರು ತಮ್ಮ ತಲೆಗಳನ್ನು ನುಣ್ಣಗೆ ಮಾಡಿಕೊಂಡಿದ್ದಾರೆ. ಕಾರಣ: ಪಶ್ಚಿಮ ಏಶಿಯಾದಲ್ಲಿಯ ಇತ್ತೀಚಿಗಿನ ಘಟನೆಗಳು ಮತ್ತು ಇನ್ನೊಂದು ಲೋಕ ಸಂಗ್ರಾಮದ ಭೀತಿ. ಪ್ರಪಂಚದಲ್ಲಿ ಶಾಂತಿ ನೆಲೆಸುವವರೆಗೂ ಅವರು ಬೋಳಿಸಿದ ತಲೆಯವರಾಗೇ ಇರಲು ಇಚ್ಛಿಸಿದ್ದಾರೆ.

ಬಲಿದಾನದ ಹಿಂದೆ.....

ವಾರದ ಕತೆ

ಕಥೆಗಾರರು :

ವಿ. ಮಾದಯ್ಯ

ಆಕಾಶದಲ್ಲಿ ದಟ್ಟವಾಗಿ ಮೋಡಗಳು ಮುಸುಕಿಕೊಂಡಿದ್ದುವು. ಮಳೆಯನ್ನು ಹೊತ್ತು ತರುತ್ತಿದ್ದ ಗಾಳಿಯು 'ಸುಂಯ್' ಎಂದು ಬೀಸುತ್ತಿತ್ತು. ರಾಜಣ್ಣ ರಾತ್ರಿ ಕೆಲಸಕ್ಕೆ ಹೊಲಡಲನುವಾಗಿದ್ದ. ಸೈಕಲ್ ಮೇಲೆ ಕುಳಿತು ಬಲಗಾಲನ್ನು ಹೊಸ್ತಿಲ ಮೇಲಿಟ್ಟು ಮನೆಯೊಳಕ್ಕೆ ತನ್ನ ದೃಷ್ಟಿ ಬೀರಿದ್ದ — ಮನೆಯೊಳಗಿದ್ದ ಅವನಾಕೆ ಪಾರ್ವತಿ ಬೇಗ ಬೇಗ ಕ್ಯಾರಿಯರ್ ಬೆಳಗಿ ಅದಕ್ಕೆ ಅನ್ನವನ್ನು ತುಂಬಿಕೊಂಡು ಬಂದು, ಕೆಲಸಕ್ಕೆ ಹೊರಡಲನುವಾಗಿದ್ದ ತನ್ನ ಪತಿಯ ಕೈಗೆ ಕೊಟ್ಟಳು. ರಾಜಣ್ಣ ಅದನ್ನು ಸೈಕಲ್ಲಿಗೆ ತಗಲಿಸಿಕೊಂಡನು.

"ಮಳೆ ಬರೋ ಹಾಗಿದೆ!" ಪಾರ್ವತಿ ಆಕಾಶದೆಡೆಗೆ ತನ್ನ ದೃಷ್ಟಿ ಹಾಯಿಸಿದಳು.

"ಮಳೆ ಬರೋಕ್ಮುಂಚೆ ಫ್ಯಾಕ್ಟರಿ ಸೇರ್ಬಿಡ್ತೀನೆ! ಹೋಗ್ಲಾ?" ಎನ್ನುತ್ತಾ ರಾಜಣ್ಣ ಪಾರ್ವತಿಯ ಕೆನ್ನೆಗೆ ಒಂದು ಪುಟ್ಟ ಏಟನ್ನು ಕೊಟ್ಟು ಹೊರಟ. ಪಾರ್ವತಿಯು ತನ್ನ ಒಪ್ಪಿಗೆ ಎಂಬಂತೆ ತಲೆಯಾಡಿಸಿ ಮುಗುಳ್ನಕ್ಕಳು.

ಅವರಿಬ್ಬರಿರುವ ಪುಟ್ಟ ಸಂಸಾರ ರೂಪಗೊಂಡು ಇನ್ನೂ ವರ್ಷದ ಗಡಿ ದಾಟಿರಲಿಲ್ಲ. ರಾಜಣ್ಣ ಊರಿಗೆ ಮೂರು ಮೈಲಿ ದೂರವಿರುವ ಒಂದು ಸಿಲ್ಕ್ ಫ್ಯಾಕ್ಟರಿಯಲ್ಲಿ ಕೆಲಸಗಾರನಾಗಿದ್ದ. ಬರುವ ಮೂವತ್ತೈದು ರೂಪಾಯಿ ಸಂಬಳದಲ್ಲಿ ಇಬ್ಬರ ಜೀವನ ಸಾಗಿಸಬೇಕಾಗಿತ್ತು. ಮುಗ್ಧೆ ಪಾರ್ವತಿ ಬಡತನದ ಬವಣೆಯನ್ನನುಭವಿಸಿ, ತನ್ನ ಗಂಡನ ಭುಜಕ್ಕೆ ಭುಜ ಕೊಟ್ಟು ಸಂಸಾರ ಸುಸೂತ್ರವಾಗಿ ಸಾಗಿಸಲು ನೆರವಾಗಿದ್ದಳು.

ರಾಜಣ್ಣ ಒಂದು ದಿನ ತನ್ನ ಕೆಲಸದಲ್ಲಿ ನಿತರನಾಗಿದ್ದ. ಹಿಂಗಡೆಯಿಂದ ಯಾರೊ ಕರೆದಂತಾಯಿತು. ತಿರುಗಿ ನೋಡಿದ! ಆಫೀಸ್ ಬಾಯ್ ಬಂದು, ಮ್ಯಾನೇಜರ್ ಕರೆಯುತ್ತಾರೆಂಬುದಾಗಿ ಹೇಳಿ ಹೋದ. ಕರೆಯ ಹಿಂದಿನಿಂದಲೇ ರಾಜಣ್ಣ ಮ್ಯಾನೇಜರರ ಕೊಠಡಿಗೆ ಸಾಗಿದ. ಅದೇನನ್ನೋ ಬರೆಯುತ್ತ ಕುಳಿತಿದ್ದರು ಮ್ಯಾನೇಜರರು:

"ಇಲ್ನೋಡು ರಾಜು! ನೆನ್ನೆ ದಿನ, ಕೆಲಸಗಾರರನ್ನೆಲ್ಲಾ ಕರಕೊಂಡು ಬಂದಿದ್ನಲ್ಲಾ ಆ ರ್‍ಯಾಸ್ಕಲ್ ಕೊಂಡಾಚಾರಿ, 'ಕೂಲಿ ಜಾಸ್ತಿ ಮಾಡ್ಬೇಕು; ಇಲ್ದಿದ್ರೆ ನಿಮ್ಮನ್ನೆಲ್ಲಾ ಗೇಟ್ನಿಂದಾಚೆ ಹೊಡಿತೀವಿ', ಅಂತ ಹೇಳಿದ್ದು ನಿನ್ಗೆ ಗೊತ್ತೇ ಇದೆ. ನೋಡಪ್ಪಾ! ನೀನೊಬ್ಬ ನನ್ನ ಪರವಾದರೆ ಕೊಂಡಾಚಾರಿಯ ಕೈಗೆ ಬೇಡಿ ತೊಡಿಸ್ತೀನಿ; ನಿನಗೆ ಸೂಪರ್‌ವೈಜರ್ ಚಾನ್ಸ್ ಕೂಡ ಕೊಡುತ್ತೇನೆ. ನೀನ್ ಮಾತ್ರ ಹೆಚ್ಚಿನ ಕೂಲಿ ಕೇಳಿಕೆಯನ್ನು ತಪ್ಪಿಸಬೇಕು"

ಎಂದು ಪಿಸು ಮಾತಿನಲ್ಲಿ ಹೇಳಿದರು.

ರಾಜಣ್ಣನು ಕೆಲಸಗಾರರಲ್ಲೆಲ್ಲಾ ಪ್ರಭಾವಶಾಲಿಯಾದ ವ್ಯಕ್ತಿಯೆಂಬುದು ಎಲ್ಲರಿಗೂ ಗೊತ್ತಿತ್ತು. ಇವನೊಬ್ಬನನ್ನು ತಮ್ಮ ಭುಟ್ಟಿಗೆ ಹಾಕಿಕೊಳ್ಳಲು ಮ್ಯಾನೇಜರ್ ಸತತ ಪ್ರಯತ್ನಪಡುತ್ತಿದ್ದರು. ಮ್ಯಾನೇಜರರು ರಾಜಣ್ಣನನ್ನೇ ಮಿಳಿಮಿಳಿ ನೋಡುತ್ತಿದ್ದರು. ರಾಜಣ್ಣನಿಗೇನೋ ಸಂಕಟವಾಯಿತು. ನಿದಾನವಾಗಿ ಮಾತನಾಡಿದ. "ಸಾರ್! ದಯವಿಟ್ಟು ಕ್ಷಮಿಸಿ; ಅಂತಾ ಕೆಲಸ ಮಾಡಲು ನನ್ನಿಂದ ಸಾಧ್ಯವಿಲ್ಲ" ಎಂದು ಹೇಳಿ, ನೇರವಾಗಿ ತನ್ನ ಕೆಲಸಕ್ಕೆ ಹೊರಟುಬಿಟ್ಟ.

'ಆ ಮಟ್ಯಾಳನನ್ನು ಕೇಳಬಾರದಿತ್ತು. ನಾನು ಕೇಳಿದ ಮೇಲೆ ಆತ ಎದುರಾಡಬಾರದಿತ್ತು' ಎಂದು ಮ್ಯಾನೇಜರರು ಒಳಗೊಳಗೇ ಕುದಿಯತೊಡಗಿದರು. ಸರಿ, ಅವನನ್ನು ಹೊರಗೆ ಹಾಕುವುದೇ ಇನ್ನು ಎಂದುಕೊಂಡರು.

ಕಾರಣ ?

ಒಂದು ದಿನ ಸ್ವತಃ ಮ್ಯಾನೇಜರೆ ಬಂದು, ರಾಜಣ್ಣ ಕೆಲಸ ಮಾಡುತ್ತಿದ್ದ ಯಂತ್ರದ ಬಳಿ ಸಿಲ್ಕನ್ನು ಕತ್ತರಿಸಿ ಹಾಕಿಸಿದರು; ಮತ್ತೆ ಕೆಲವಕ್ಕೆ ಎಣ್ಣೆ ಚೆಲ್ಲಿಸಿ, ರಾಜಣ್ಣನೇ ಮಾಡಿರುವನೆಂದು ಆರೋಪ ಹೊರಿಸಿ, ಕೆಲಸದಿಂದ ತೆಗೆದುಹಾಕಿದ್ದಲ್ಲದೆ, ಪೋಲೀಸರಿಗೆ ದೂರನ್ನೂ ಸಹ ಕೊಟ್ಟರು.

ರಾಜಣ್ಣನಿಗೆ ಕೆಲಸ ಹೋಯಿತು. ಇನ್ನು ಮುಂದಿನ ಗತಿ? ಮೊದಲೇ ಬಡತನದಲ್ಲಿದ್ದು ಈಗ ಅರೆ ಹೊಟ್ಟೆಯ ಗಂಜಿಯೂ ದೊರಕದ ಸ್ಥಿತಿಗೆ ಬಂದಿಳಿದ. ತನ್ನ ಮುಂದಿನ ಭವಿಷ್ಯವನ್ನು ನೆನೆದು ಅವನ ಕಣ್ಣುಗಳು ಮಸಕಾದುವು. ಕೆಲಸ ಖಾಲಿ ಇದೆ, ಎಂಬ ಯಾವ ಬೋರ್ಡೂ ಅವನನ್ನು ಕರೆಯಲ್ಲಿ. ಮನೆ ಮಾತ್ರ ದಿನದಿನವೂ ಖಾಲಿಯಾಗುತ್ತಿತ್ತು. ಸ್ನೇಹಿತರ ಬಳಿ ಕೈಯಾನುವುದೆ ಖಾಲೀ ಕೈಕೆಲಸವಾಯಿತು.

ಪಾರ್ವತಿ ದಿಙ್ಮೂಢಳಾಗಿ ಸುಮ್ಮನೆ ಸುತ್ತುತ್ತಿದ್ದಳು ಮನೆಯಲ್ಲಿ. ಪತಿಯು ಎಂದಿನಂತಿಲ್ಲದೆ ಇಂದು ಹಸನ್ಮುಖಿಯಾಗಿ ಮನೆಗೆ ಬಂದದ್ದನ್ನು ನೋಡಿ ಚಕಿತಳಾದಳು.

"ಕೆಲಸಕ್ಕೆ ಹೋಗೋಹಾಗಾಯಿತು ಪಾರ್ವತಿ!" ಹರ್ಷದಿಂದ ರಾಜಣ್ಣನ ಬಾಯಿ ನುಡಿಯಿತು. ಪಾರ್ವತಿ ಅವನನ್ನೇ ನಿಟ್ಟಿಸಿ ನೋಡಿದಳು.

ರಾಜಣ್ಣನನ್ನು ಕೆಲಸದಿಂದ ತೆಗೆದುದು ಅಕ್ರಮವೆಂದು ಸಾರಿ ಕೆಲಸಗಾರರೆಲ್ಲಾ ಕೋರ್ಟಿನಲ್ಲಿ ದಾವೆ ಹೂಡಿದ್ದರು. ಆರು ತಿಂಗಳು ಕೋರ್ಟಿನಲ್ಲಿ ವಿಚಾರಣೆ ನಡೆದು, ನ್ಯಾಯಾಧೀಶರು ತಮ್ಮ ತೀರ್ಪಿನಲ್ಲಿ ರಾಜಣ್ಣನನ್ನು ತಪ್ಪಿತಸ್ಥನಲ್ಲವೆಂದು ತಿಳಿಸಿ, ಅವನನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಅಪ್ಪಣೆ ಮಾಡಿದ್ದರು. ತಿರುಗಿ ಕೆಲಸ ದೊರಕಿದುದು ಪಾರ್ವತಿಗೆ

ಪುಂಗಾಳು

"ಆಹಾರ ಪರಿಸ್ಥಿತಿ ಎಂದು ಕರೆಯುವಂಥಾ ಪರಿಸ್ಥಿತಿಯೇನೂ ಇಲ್ಲ, ಅದನ್ನು ಚರ್ಚಿಸಲಾರಂಭಿಸಿದರೆ ಆ ಪರಿಸ್ಥಿತಿಯುಂಟಾಗುತ್ತದೆ". ಎಂದು ಮೈಸೂರು ಮಂತ್ರಿ ಮಹಾಶಯರ ಹೇಳಿಕೆ—ಇಂದಿನ ಕಳವಳಕಾರಕ ಆಹಾರಪರಿಸ್ಥಿತಿಯ ಬಗ್ಗೆ.

—ನಮ್ಮ ತಾತ ನಾವು ಚಿಕ್ಕವರಾಗಿದ್ದಾಗ ನಮಗೊಂದು ಮಾತು ಮಲಗಿಕೊಳ್ಳುವ ಮುಂದೆ ಹೇಳುತ್ತಿದ್ದರು: "ಹುಡುಗ್ರಾ ತಿಗಣೆ ಇವೆ ಎಂದ್ರೆ ಕಚ್ತಾವೆ. ಸುಮ್ನೆ ಮಕ್ಕೋಳಿ".

o o o o

ಆದ್ರೆ ನನ್ನ ಕಿರಿಯ ತಮ್ಮ ಎಳೇ ಮಗುಮ್ಮೆ ಕೆರೆದುಕೊಳ್ಳುವಾಗ ಕೈಗೆ ತಿಗಣೆ ಬಂದರೆ ಸುಮ್ಮನೆ ಒರೆದು ಹಾಕಿ ಬಿಡುತ್ತಿದ್ದ. ನಾವು ಎಷ್ಟೆಂದರೂ ತಿಳಿಯದ ಚಿಕ್ಕ ಮಕ್ಕಳು ನೋಡಿ. ತಾತನ ಮಾತಿನಲ್ಲಿ ನಿಜಾಂಶವನ್ನು ಕಾಣದಿರಲಿಕ್ಕಾಗುತ್ತದೆಯೇ ?

o o o o

ಮಂತ್ರಿಗಳ ಹೇಳಿಕೆಯ ಪ್ರಕಾರ ಅಥವಾ ಅವರ ಹೇಳಿಕೆಯ ಅರ್ಥ 'ಆಹಾರಾಭಾವದ ಚಿಂತೆಯನ್ನು ತಲೆಯಲ್ಲಿ ತುಂಬಿಕೊಳ್ಳಬೇಡಿ' ಎಂಬುದರಲ್ಲಿ ಅಕ್ಕೀ ಕಾಳಿನಷ್ಟೂ ಸಂದೇಹವಿಲ್ಲ.

o o o o

ಆಹಾರ ಪರಿಸ್ಥಿತಿಯ ಬಗ್ಗೆ ಸಚಿವರು ಹೇಳಿದ ಮಾತು ಇನ್ನೂ ಎರಡು ಬಗೆಯಿಂದ ನಿಜವಾಗಿದೆ.

★ ನಮ್ಮ—ನಿಮ್ಮ ಬಡವರ ಮನೆಯಲ್ಲಿ 'ನಾಳೆ ಅಕ್ಕಿಗೇನು ಗತಿ' ಎಂಬ ಚರ್ಚೆ ನಡೆಯುವಂತೆ ಮಂತ್ರಿಗಳಲ್ಲಿ ಮನೆಯಲ್ಲಿ ನಡೆಯಲಾರದುದರಿಂದ ಆಹಾರ ಪರಿಸ್ಥಿತಿ ಎಂದು ಹೇಳುವಂತಹ ಪರಿಸ್ಥಿತಿಯೇನಿಲ್ಲ.

★ ಮಂತ್ರಿಗಳು 'ಆಹಾರ ಪರಿಸ್ಥಿತಿ'ಯೆಂದು ಹೇಳಿರುವರೇ ವಿನಃ ಆಹಾರ ಬೆಲೆಯ ಪರಿಸ್ಥಿತಿಯೆಂದು ಹೇಳಿಲ್ಲ. ಪೇಟೆಯಲ್ಲಿ ಹಾಲಿನ ಖೋವ, ಪೇಢೆ, ಇನ್ನೂ ಅನೇಕ ಹೆಚ್ಚು ಬೆಲೆಯ 'ಸಿಹಿ'ಗಳು ಸಿಕ್ಕುತ್ತವೆ. ಅವುಗಳ ಬೆಲೆ ಬಡವರ ಕೈಗೆಟುಕದುದೆಂದು ಅಭಾವ ಪರಿಸ್ಥಿತಿಯೆಂದು ಹೇಗೆ ಹೇಳಲಿಕ್ಕಾದೀತು ?

o o o o

"ಕಮ್ಯೂನಿಸಂಗೆ ಅಹಿಂಸೆ ಹಾಗೂ ದೇವರ ಅಸ್ತಿತ್ವವನ್ನು ಸೇರಿಸಿದರೆ ಸರ್ವೋದಯ ತತ್ವವಾಗುವುದು" ಎಂಬುದಾಗಿ ಮಾಜೀ ಮುಖ್ಯ ಮಂತ್ರಿ ಶ್ರೀ ಕೆಂಗಲ್ಲರು ಪರಿಷತ್ತಿನಲ್ಲಿ ಮಾತನಾಡುತ್ತ ಹೇಳಿದರಂತೆ.

ಶ್ರೀ ಕೆಂಗಲ್ಲ ಸಂಶೋಧಿತ ಈ ನೂತನ ತತ್ವದ ಹೆಸರು 'ಹಾರಿಕೆ ಹನುಮಂತಪ್ಪ ಬ್ರಾಂಡ್ ಸರ್ವೋ—ಕಮ್ಯೂನಿಸಂ' ಎಂಬುದಾಗಿ ಆಗಿದ್ದು ಸಂಧಿಸಾಧಕರ ರಾಜಕೀಯ ಪೇಟೆಯಲ್ಲಿ ಇನ್ನೂ ಅಷ್ಟೊಂದು ಗಿರಾಕಿಗಳು ಇವರಿಗೆ ದೊರೆಯುತ್ತಿಲ್ಲವೆಂದು ಹೇಳಲಾಗಿದೆ.

o o o o

ರಷ್ಯನ್ನರು ಕಮ್ಯೂನಿಸ್ಟರಾಗಿದ್ದರೂ ಅವರು ಸಾಮಾನ್ಯ ಭಾರತೀಯರಿಗಿಂತ ಬೇರೆಯಾಗಿಲ್ಲವೆಂದೂ, ಭಾರತೀಯರಂತೆ ಮಾನವೀಯರಾಗಿದ್ದಾರೆಂದೂ, ಆದರೆ ಅವರು ತಮ್ಮ ಧ್ಯೇಯದಲ್ಲಿ ನಂಬಿಕೆಯನ್ನಿಟ್ಟುಕೊಂಡಿದ್ದಾರೆಂದೂ" ಹೇಳಿದರಂತೆ ಶ್ರೀ ಕೆಂಗಲ್ ದೇವರು.

—ಆದರೆ ಯಾವ ನಂಬಿಕೆಯೂ ಇಲ್ಲದೆ, ಅಹಂದ ಬೆಂಬತ್ತಿರುವ ಅಮಾನುಷರಾಗಿರುವ ಹಲವು ಅಸಾಮಾನ್ಯ ಭಾರತೀಯರಿಗೂ ಅವರಿಗೂ ಇರುವ ವ್ಯತ್ಯಾಸವನ್ನಾರೂ ಈವರೆಗೂ ಸಂಶೋಧಿಸದಿರುವುದಕ್ಕಾಗಿ ಶ್ರೀ ಕೆಂಗಲ್ ಹನುಮಂತಯ್ಯನವರ ಪರವಾಗಿ ನಮ್ಮ ಅಭಿನಂದನೆಗಳು.

o o o o

ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ಕೇವಲ ಯಾತ್ರಾರ್ಥಿಯಾಗಿ ಸೋವಿಯತ್ ರಷ್ಯಕ್ಕೆ ತೆರಳಿದ್ದರಂತೆ. ಅವರ ಈ ಯಾತ್ರೆ ಚೀನಕ್ಕೂ, ಅಮೇರಿಕೆಗೂ ಇನ್ನೂ ಮುಂದುವರಿಯುತ್ತದೆಯಂತೆ.

ಶರಣು ಶರಣು ರಾಜಕೀಯ ಸಂತ, ಸಾಧೂ ಮಹಾರಾಜಾ !

o o o o

ಸಂತ--ಸಾಧುಗಳೆನ್ನುತ್ತಲೇ ಒಂದು ಮಾತು ನೆನಪಾಗುತ್ತದೆ :

"ಹಗಲೀ ಸಾಧೂ ರಾತ್ರಿ ಸಾಧುಸೂ..." ಎಂಬುದೊಂದು ಧಾರವಾಡೀ ಗಾದೆ ಮಾತು.

—ಈ ಮಾತು ಕೇವಲ ಸಾಧು—ಸಂತರಿಗೆ ಮಾತ್ರ ಅನ್ವಯಿಸುವದೆಂದೂ ರಾಜಕೀಯ ಸಂತ, ಸಾಧುಗಳಿಗಲ್ಲವೆಂದೂ ನಾವು ಇಲ್ಲಿ ವಿವರಣೆ ಕೊಡುತ್ತೇವೆ.

o o o o

ಮೈಸೂರಿನ ಸಚಿವರಲ್ಲೊಬ್ಬರಾದ ಮತ್ತು ತಾಳಕೇರಿ ಪೈಲವಾನನೆಂದು ಖ್ಯಾತರಾಗಿದ್ದ ಸಚಿವ ಶ್ರೀ ಟಿ. ಸುಬ್ರಹ್ಮಣ್ಯಮ್‌ರವರು ಹೋದಲೆಲ್ಲಾ ತಾವು ಮಾತನಾಡುವ ಮುಖ್ಯ ವಸ್ತುವನ್ನು ಬಿಟ್ಟು ಕಮ್ಯೂನಿಸಂನ್ನು ದೂಷಿಸುವದರಲ್ಲೇ ಕಾಲಕಳೆದು ಬರುತ್ತಿರುವದಾಗಿ ವರದಿಗಳು ಹೇಳುತ್ತಿವೆ.

—ಅವರು ಎಷ್ಟೆಂದರೂ ಪ್ರಸಿದ್ಧ ತಾಳಕೇರಿ ಪೈಲವಾನರು ನೋಡಿ. ಇದೀಗ ರಾಜಕೀಯ ಕುಸ್ತಿಗಳು ಅವರ ಮಟ್ಟಿಗೆ ಒಂದು ಹತೋಟಿಗೆ ಬಂದಿರುವುದರಿಂದ ಅವರಿಗೆ ಹೇಗೆ ಹೇಗೋ ಆಗುವುದು ಸ್ವಾಭಾವಿಕ. ಏನಿಲ್ಲದಿದ್ದರೂ ಕಮ್ಯೂನಿಸಂನೊಡನೆ ಗಾಳಿ ಗುದ್ದಾಟ ನಡೆಸುವದರಲ್ಲಾದರೂ ಅವರಿಗೆ ತೃಪ್ತಿ. ಈ ಪೈಲ್ವಾನರ ಈ ಗಾಳಿ ಕುಸ್ತಿಯ ವೀಕ್ಷಣೆಯಲ್ಲಿ ಜನ ತಮ್ಮ ಸಮಸ್ಯೆಯನ್ನೇ ಮರೆಯುವುದು ಸಾಧ್ಯವಿರುವದರಿಂದ! ಅವರು ಕಮ್ಯೂನಿಸಂಗಿದಿರು ಷಡ್ಡೂ ಹೊಡೆಯುತ್ತಿರುವುದು.

o o o o

ಅಮೇರಿಕೆಯ ಆಗಸ್ಟ 24ರಂದು ಪ್ರಯೋಗಿಸಿದ 'ಐದನೇ ಎಕ್ಸ್‌ಪ್ಲೋರರ್' ಕೃತಕ ಉಪಗ್ರಹವು ಪಥವನ್ನು ಸೇರದೆ ವಿಫಲವಾಯಿತೆಂದು ಕೇಪ್‌ಕೆನವರಾಲ್‌ನಿಂದ ಸುದ್ದಿ.

—ಪಾಪ, ಈ ಭೂಗ್ರಹದ ಮೇಲೆ ಅಮೇರಿಕೆಯ ಗ್ರಹಚಾರ ಕೆಟ್ಟಿರುವಾಗ ಅಂತರಿಕ್ಷದ ಗ್ರಹಲೋಕದಲ್ಲಿ ಈ ಕೃತಕ ಉಪಗ್ರಹವು ಹೇಗೆ ತಾನೆ ಯಶಸ್ವಿಯಾದೀತು ಎಂದು ಹೋರಾರತ್ನರೊಬ್ಬರ ಅಭಿಪ್ರಾಯ.

o o o o

ಸೋವಿಯತ್ ಯೂನಿಯನ್ನಿನ ಮೇಲೆ ಹಾರಾಡುವಂತೆ ಅಮೇರಿಕೆಯು ಈಶಾನ್ಯ ದಿಕ್ಕಿನ ಕಡೆ ಪ್ರಯೋಗಿಸಲಿರುವ ಐದು ಕೃತಕ ಉಪಗ್ರಹಗಳಲ್ಲಿ ಈ "ಐದನೇ ಎಕ್ಸ್‌ಪ್ಲೋರರ್" ಉಪಗ್ರಹವೇ ಮೊದಲನೆಯದಂತೆ.

ಅಯ್ಯೊ ಮೊದಲ ತುತ್ತಿಗೆ ಬಂಡೆಗಲ್ಲು ಪಾಪ!

o o o o

—ಸೋವಿಯತ್ ಗಡಿಗೆ ಹೊಂದಿಕೊಂಡೇ ಹೂಡಿದ್ದ ಮಧ್ಯಪ್ರಾಚ್ಯದಲ್ಲಿಯ ಅಮೇರಿಕೆಯ ಹೊಂಚು-ಸಂಚುಗಳೆಲ್ಲ ವಿಫಲವಾಗುತ್ತಿರುವಾಗ ಪಾಪ, ಸಾವಿರಾರು ಮೈಲಿ ದೂರದಿಂದಿಟ್ಟ ಈ ಗುರಿ ಹೇಗೆ ತಾನೆ ಮೊರೆದು ಗುರಿಗಾಣದೆ ಇದ್ದೀತು, ಅಲ್ಲವೆ ?

o o o o

"ಚೌಚೌವಾಲಾ"

ಚುಟು

ರಾಜಕೀಯ

ಮರೆತು
ಮೆರೆಯ

ನಡೆದಿರ

ನರಸಿಂಹ

ಹಗಲಿರುಳ

ನರಸಿಂ
ಹಿರಣ್ಯಕಶಿಪು

ಪ್ರಹ್ಲಾ

ಹಿಡಿಸಲಾರದ
"ಹಾಗಾದ್ರೆ
ಗ್ಬೇಕೆ?" ಅ
ಮೂಡಿತು.
"ಹೌದು!
ರಾಜಣ್ಣ ಹೊ
ಪಾರ್ವತಿ
ಕೊಂಡು,
ಅನ್ನವನ್ನು ತ
ವಿನಿಂದ ಗಂಡ
ಣ್ಣನು ಅದ
'ನಾನು ಹೋ
ನಂತೆ ಪತ್ನಿ
ಕೊಟ್ಟ. ಇ
ಗಳ ನೋವು,
ಯಾಗಿತ್ತು.
ರಾಜಣ್ಣನ
ದ್ದ ಅಲ್ಲಿನ ಕೆ
ನ್ನುಂಟುಮಾ
ಮಾತ್ರ ನುಂ
ಮೊದಲು
ಸುಪ್ತಗೊಂಡಿ
ತ್ತೊಂದು ಬ
ಡು, ತಮ್ಮ
ದಿಸಿಕೊಂಡರು
ಡೋಲ್ಲ.
ಡರೆ, ನಿಮ್ಮ
ತ್ತೀನೆ" ಎಂ
ಜರ್.
ಘೋಷಣೆ
ರ್ಮಿಕರ ಮೊ
ಡಿತಕ್ಕೆ ತಕ್ಕ
ಲಿಯಲ್ಲಿ ಹೆಚ್ಚ
ರರ ಸುಲಿಗೆ
ಎಂಬ ಘೋಷ
ಣ್ಣನು ಬಾ
ಮುಂದಾಗಿ
ಗುಂಪಾದ
ಸೇತುವೆಯೊ
ಬರುತ್ತಿತ್ತು..
"ಢಣಾರ್
ಗುಂಡಿನ ಶಬ್ದ
ಗಡೆ ಗುಡ್ಡ
ಕಾರ್ಮಿಕರ

(

ನೀವೇನು ಹೇಳುತ್ತೀರಿ

ಕೇರಳದ ಕಮ್ಯೂನಿಸ್ಟ್ ಸರ್ಕಾರದ ಮೇಲೆ ಕತ್ತಿ ಹಿಡಿದು ನಿಂತಿರುವವರಲ್ಲಿ ಎಲ್ಲರೂ ಸೇರಿದ್ದಾರೆ. ಪರಸ್ಪರ ತಾತ್ವಿಕ ವಿರೋಧದ ರಾಜಕೀಯ ಪಕ್ಷಗಳು, ಪ್ರತಿಗಾಮಿ ಪಕ್ಷಗಳು ಅಪವಿತ್ರ ಮೈತ್ರಿಯನ್ನು ಈ ವಿಷಯದಲ್ಲಿ ವಹಿಸಿ ನಿಂತಿವೆ. ಭಾರತದ ಅನೇಕ ಪ್ರಮುಖ ಇಂಗ್ಲೀಷ್ ಪತ್ರಿಕೆಗಳೂ ಇವರ ಪಡೆಯಲ್ಲಿ ಸೇರಿಕೊಂಡಿವೆ. ಅವರು ಮಾಡುತ್ತಿರುವ ಅಪಪ್ರಚಾರ ಚಿಕ್ಕದೇನಾಗಿಲ್ಲ.

ಕೇರಳದಲ್ಲಿ ಖೋಟಾ ಮತದಾರರ ಸಂಖ್ಯೆಯ ಅಪಾದನೆಯ ವಿಷಯವಾಗಿ ಇದೇ ಕಾಲಂನಲ್ಲಿ ಈಗೆರಡು ವಾರಗಳ ಹಿಂದೆ ಬರೆಯಲಾಗಿತ್ತು. ಸತ್ಯಾಂಶ ತಿಳಿದಾಗ ವಾಚಕರು ವಿಸ್ಮಿತರಾಗಿರಲು ಸಾಕು. ಅಂಥದೇ ಇನ್ನೊಂದು ಅಪಾದನೆಗಾಗಿ ಇಲ್ಲಿ ಸತ್ಯಾಂಶವಿದೆ

"ಕೇರಳ ಸರ್ಕಾರದ ಹೆಚ್ಚಿನ ಶಾಲಾ ಪಠ್ಯ ಪುಸ್ತಕಗಳ ಹೆಚ್ಚಿನ ಮುದ್ರಣ ಕಾರ್ಯಗಳನ್ನು ಕಮ್ಯೂನಿಸ್ಟ್ ಪ್ರೆಸ್‌ಗಳಿಗೆ ಕೊಟ್ಟಿದೆ" ಎಂಬುದೇ ಈ ಅಪಾದನೆ. ಬೊಂಬಾಯಿಯ 'ಟೈಮ್ಸ್ ಆಫ್ ಇಂಡಿಯಾ'ದಲ್ಲಿ ಈ ಸುದ್ದಿ ದೊಡ್ಡದಾಗಿ ಬಂತು. ಇನ್ನೂ ಅನೇಕ ಪತ್ರಿಕೆಗಳಲ್ಲಿ ಕೂಡ. ಆದರೆ ಸತ್ಯಾಂಶವೇನು ?

ಕೆಲವೊಂದು ಪಠ್ಯ ಪುಸ್ತಕಗಳ ಮುದ್ರಣ ಕಾರ್ಯವನ್ನು ಒಟ್ಟು ಹದಿನಾಲ್ಕು ಖಾಸಗೀ ಮುದ್ರಣಾಲಯಗಳಿಗೆ ಕೊಟ್ಟಿತ್ತು. ಅವುಗಳಲ್ಲಿ ಒಂದೇ ಒಂದು ಪುಸ್ತಕವನ್ನು ಒಂದೇ ಮುದ್ರಣಾಲಯಕ್ಕೆ (ದೇಶಾಭಿಮಾನಿ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಕೋಝಿಕೋಡ್) ಕೊಟ್ಟಿತ್ತು. ಇದಕ್ಕೆ ಮಾತ್ರ ಕಮ್ಯೂನಿಸ್ಟ್ ಪತ್ರಿಕೆಯೊಂದರ ಸಂಬಂಧವಿತ್ತು.

ಬೇರೆ ಮುದ್ರಣಾಲಯಗಳ ಪಟ್ಟಿ ಹೀಗಿದೆ: ಮಾತೃಭೂಮಿ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಕೋಝಿಕೋಡ್ (ಕಾಂಗ್ರೆಸ್ ಪರ ಮಾಲೀಕರ ಪ್ರೆಸ್ಸು) ದೇಶಾಭಿಮಾನಿ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಕೋಝಿಕೋಡ್ (ಕಮ್ಯೂನಿಸ್ಟ್ ಪರ ಪ್ರೆಸ್ಸು), ನಾರ್ಮನ್ ಪ್ರಿಂಟಿಂಗ್ ಬ್ಯೂರೋ, ಕೋಝಿಕೋಡ್, ಮಂಗಳೋದಯಂ ಪ್ರೆಸ್, ತ್ರಿಚೂರು, ಗೀತಾ ಪ್ರೆಸ್, ತ್ರಿಚೂರು, ಎ. ಆರ್. ಪಿ. ಪ್ರೆಸ್, ಕುಣ್ಣಮ್‌ಕುಳಂ; ಮಾರ್ ಥಿಯೋಥೀಸ್ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಎರ್ನಾಕುಲಂ, (ಚಾಲ್ಡೀಯನ್ ಚರ್ಚ್ ಪರ ಮಾಲೀಕರು); ವಿಶ್ವನಾಥ ಪ್ರೆಸ್, ಎರ್ನಾಕುಲಂ; ಐ ಎಸ್. ಪ್ರೆಸ್, ಎರ್ನಾಕುಲಂ (ಕ್ಯಾಥೋಲಿಕ್ ಚರ್ಚ್‌ನವರ ಪ್ರೆಸ್ಸು) ಶ್ರೀರಾಮ ವಿಲಾಸಂ ಪ್ರೆಸ್, ಕ್ವಿಲೋನ್; ಎಸ್. ಟಿ. ರೆಡ್ಡಿಯಾರ್ ಪ್ರೆಸ್, ಕ್ವಿಲೋನ್; ಅಝಾದ್ ಪ್ರಿಂಟರ್ಸ್, ಕ್ವಿಲೋನ್ (ಮಾಜೀ ಕಾಂಗ್ರೆಸ್ ಸಚಿವರೊಬ್ಬರ ಪ್ರೆಸ್ಸು); ಇಂದಿರಾ ಪ್ರಿಂಟಿಂಗ್ ವರ್ಕ್ಸ್, ತ್ರಿವೆಂಡ್ರಮ್, ಸೇಯಿಂಟ್ ಜೋಸೆಫ್ಸ್ ಪ್ರೆಸ್, ತ್ರಿವೆಂಡ್ರಮ್ (ಕ್ಯಾಥೊಲಿಕ್‌ರ ಪ್ರೆಸ್ಸು)

ಈ ವಿಷಯವನ್ನು ಕೇರಳದ ಸರ್ಕಾರೀ ಪ್ರಕಟಣೆಯೊಂದು ಎಪ್ರಿಲ್ ೨೪ರಂದೇ ಪ್ರಸಿದ್ಧಪಡಿಸಿತ್ತು !

ಅದನ್ನು ಗಮನಿಸದ ಈ ಅಂಧರು ಮಾಡುವ ಅಪಾದನೆಗಳಿಗೆ ಯಾರು ತಾನೆ ಉತ್ತರ ಕೊಟ್ಟಾರು ?

ಪ್ರತಿಪಕ್ಷಗಳವರ ಪ್ರತಿಗಾಮಿಗಳ ಅಪಾದನೆಗಳಲ್ಲಿರುವ ಹುರುಳು ಇಷ್ಟೆ.

ಇನ್ನೂ ಹಳೇ ಚಾಳಿ ಬಿಟ್ಟಿಲ್ಲ!

ದೇಶವನ್ನು ಅಧೋಗತಿಯ ಆಳಕ್ಕಿಳಿಸಲು ಅತ್ಯಂತ ಸುಲಭ ದಾರಿಯು ಬ್ರಿಟಿಷರಿಗೆ ಜಾತಿ ವೈಷಮ್ಯವನ್ನು ಬೆಳೆಸುವದೇ ಆಗಿತ್ತು. ಅದರಲ್ಲಿ ಅವರು ಯಶಸ್ವಿಗಳಾದರು. ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಮಸಿ ಬಳೆದರು. ಒಟ್ಟು ಜೀವನವನ್ನು ಕಲಕಿ ಹೊಲಗೆಡಿಸಿದರು. ಆ ಚಾಳಿಯನ್ನು ಅವರು ಬಿಟ್ಟಿಲ್ಲ!

ಇತ್ತೀಚೆಗೆ ಮದರಾಸಿನ 'ಹಿಂದೂ' ಪತ್ರಿಕೆಯಲ್ಲಿ ಮುಷ್ಕರ ನಡೆದ ಸಮಾಚಾರ ನಿಮಗೆ ಗೊತ್ತು. ಅದರ ಪರಿಣಾಮವಾಗಿ ಪತ್ರಿಕೆ ಕೆಲವು ದಿನ ಪ್ರಕಟಣೆಯನ್ನು ನಿಲ್ಲಿಸಿತು.

ಮುಷ್ಕರದ ವಿಚಾರಗಳು, ನಮ್ಮ ಜನಕ್ಕೆ ತೀರಾ ಹೊಸವೇನಲ್ಲ. ಕಾರ್ಮಿಕನ ಕೊನೆಯ ಅಸ್ತ್ರವದು. ಆದರೆ ಲಂಡನಿನ ಪ್ರಸಿದ್ಧ ರಾಜಕೀಯ ವಾರಪತ್ರಿಕೆ "ನ್ಯೂ ಸ್ಟೇಟ್ಸ್‌ಮನ್' ಬರೆದುದೇನು? ಆ ಮಹಾಶಯರಿಗೆ ಇಲ್ಲಿ ಕೋಮುವಾರ ಕಲಹದ ವಾಸನೆ ಹೊಡೆದಿದೆಯಂತೆ. 'ಹಿಂದೂ' ಸಂಪಾದಕರಾದ ಶ್ರೀ ಕಸ್ತೂರಿ ಶ್ರೀನಿವಾಸನ್ ಬ್ರಾಹ್ಮಣರೆಂದೂ ಅದಕ್ಕಾಗಿ ಈ ಮುಷ್ಕರದ ಹಿಂದೆ ಇನ್ನೂ ಆಳವಾದ ಕಾರಣಗಳಿರಬೇಕೆಂದೂ ಅವರ ಅಭಿಪ್ರಾಯ!

ಆಗಸ್ಟ 16ರ ತನ್ನ ಸಂಚಿಕೆಯಲ್ಲಿ ಅದು ಬರೆಯುತ್ತದೆ: "ಆಳವಾದ ಕಾರಣವೆಂದರೆ ದಕ್ಷಿಣ ಭಾರತದಲ್ಲಿ ವಿಶೇಷವಾಗಿ ಮದರಾಸಿನಲ್ಲಿ ಬೆಳೆದಿರುವ ತೀವ್ರ ಬ್ರಾಹ್ಮಣ ದ್ವೇಷವೇ........'ಹಿಂದೂ' ಪ್ರಕಟಣೆ ತಡೆಯಲ್ಪಟ್ಟದುದರಿಂದ ತೋಚುವುದೇನೆಂದರೆ ಮೊಟ್ಟ ಮೊದಲನೆಯ ಸಲ ಬ್ರಾಹ್ಮಣ ದ್ವೇಷದ ಭಾವನೆ ಬಂಡವಾಳ ಮತ್ತು ಶ್ರಮಗಳ ಘರ್ಷಣೆಯಲ್ಲಿ ಹರಹುಲ್ಪಟ್ಟಿದೆ".

ಶ್ರಮ ಮತ್ತು ಬಂಡವಾಳಗಳಿಗೂ ಜಾತಿ ಇರುವದಾದರೆ, ಅವುಗಳದೇ ಜಾತಿ. ಶ್ರಮಿಕರ ಜಾತಿತಾನೆ, ಬಂಡವಾಳಗಾರರ ಜಾತಿ. ಶ್ರಮಿಕರಲ್ಲಿ ಯಾವ ಜಾತಿಯವರೂ ಇರಬಹುದು, ಬಂಡವಾಳಗಾರರಲ್ಲೂ ಯಾವ ಜಾತಿಯವರೂ ಇರಬಹುದು. ಅದಕ್ಕೆ ಯಾರೇನು ಮಾಡಬೇಕು ?

'ಬಂಡವಾಳ ಮತ್ತು ಶ್ರಮಗಳ ಘರ್ಷಣೆ' ಎಂಬ ಮೂಲ ತತ್ವವನ್ನೇ ಒಪ್ಪಿಕೊಂಡ ಮೇಲೆ ಅದರ ಹಿಂದಿರುವವರ ಕೋಮುಗಳ ಬಣ್ಣ ತೋರಿಸವದರಲ್ಲಿ ಅರ್ಥವಾದರೂ ಏನಿದೆ?

ಸೋವಿಯತ್ ಸಾಹಸ

ನಿಮಗೊಂದು ಪೂರಕ ಕೈ—ಕಬ್ಬಿಣದ ಕೈ!

ಇದು ನಿಮ್ಮ ಇಚ್ಛೆಯನ್ನೀಡೆರೀಸುವ ಯಂತ್ರ!

ಬ್ರುಸ್ಸೆಲ್ಸ್‌ನಲ್ಲಿ ನಡೆಯುತ್ತಿರುವ ಅಂತರ್ರಾಷ್ಟ್ರೀಯ ಪ್ರದರ್ಶನದ ಸೋವಿಯತ್ ವಿಭಾಗದಲ್ಲೊಂದು ಅದ್ಭುತ ಯಂತ್ರವಿದೆ. ಅದೊಂದು ಕಬ್ಬಿಣದ ಕೈ! ನೀವು ಏನು ಇಚ್ಛಿಸುತ್ತೀರೋ, ಆ ಕೆಲಸವನ್ನು ಅದು ಮಾಡುತ್ತದೆ!

ನಿಮ್ಮ ಕೈಗೆ ಒಂದು ಬಳೆಯನ್ನು ಇಟ್ಟುಕೊಳ್ಳಬೇಕು. ಆ ಬಳೆಯನ್ನು ತಂತಿಗಳ ಮೂಲಕ ಕಬ್ಬಿಣದ ಕೈಗೆ ಜೋಡಿಸಲಾಗುವುದು. "ಮುಷ್ಟಿ ಬಿಗಿಯಬೇಕು" ಎಂದು ನೀವು ಯೋಚಿಸಿದರೆ ಸಾಕು, ಆ ಕಬ್ಬಿಣದ ಕೈ ಮುಷ್ಟಿ ಬಿಗಿಯುತ್ತದೆ. "ಕೈಬಿಡಿಸಲಿ" ಎಂದು ನೀವು ಇಚ್ಛಿಸಿದ ಕ್ಷಣ ಅದು ಕೈಬಿಡಿಸುತ್ತದೆ. ಆ ಯಂತ್ರ ನಿಮ್ಮ ಇಚ್ಛೆಯಂತೆ ವರ್ತಿಸಬೇಕಾದರೆ ನೀವು ಕಿರುಬೆರಳನ್ನೂ ಅಲುಗಾಡಿಸಬೇಕಾಗಿಲ್ಲ, ಒಂದು ಅಕ್ಷರ ಕೂಡ ನುಡಿಯಬೇಕಾಗಿಲ್ಲ—ಮನಸ್ಸಿನಲ್ಲಿ ಇಚ್ಛಿಸಿದರೆ ಸಾಕು, ಅದು ಕೆಲಸ ಮಾಡುತ್ತದೆ! ನಿಮ್ಮ ಯೋಚನೆ ಏನೆಂದು ತಿಳಿದುಕೊಂಡು ಆ ಯಂತ್ರ ಇಂಜೆಕ್ಷನ್ ಸಿರಿಂಜನ್ನು ಎತ್ತಿಕೊಡುವುದು, ಕಡಲೇಕಾಯಿ ಸುಲಿಯುವುದು, ಏನು ಬೇಕೋ ಅದನ್ನು ಮಾಡುವುದು.

ಈ ಅದ್ಭುತ ಯಂತ್ರವನ್ನು ತಯಾರಿಸಲು ಮೋಸ್ಕೋದ ಹಲವು ವೈಜ್ಞಾನಿಕ ಪ್ರಯೋಗ ಶಾಲೆಗಳು ಸಹಕರಿಸಿವೆ. ಇದರ ಗುಟ್ಟು ಏನು ?

ಒಬ್ಬ ಮನುಷ್ಯನು ಯೋಚನೆ ಮಾಡುವಾಗ, ಅವನ ಮೆದುಳು, ಅವನ ಅಂಗಾಂಗಗಳಿಗೆ ನಿರ್ದಿಷ್ಟ ಕೆಲಸ ಮಾಡಲು ಆಜ್ಞೆ ಕೊಡುತ್ತದೆ. ಆಗ ಅವನ ಶರೀರದ ನರಗಳಲ್ಲಿರುವ ಅತೀ ಚಿಕ್ಕದಾದ ಅಯೊನ್ಸ್ ವಿದ್ಯುತ್ ಕಣಗಳಲ್ಲಿ ಸ್ಪಂಧನ ಉಂಟಾಗುತ್ತದೆ. ಈ ಸ್ಪಂಧನ ಅತೀ ಕ್ಷೀಣವಾಗಿರುತ್ತದೆ. ಆದರೆ ದೂರದ ರೇಡಿಯೋ ಕೇಂದ್ರದ ಕ್ಷೀಣವಾದ ಪ್ರಸರಣವನ್ನು ನಿಮ್ಮ ಮನೆಯಲ್ಲಿರುವ ರೇಡಿಯೋ ಎತ್ತಿಕೊಂಡು, ಅದರೊಳಗಿನ ವಾಲ್ವ್‌ಗಳ ಮೂಲಕ ಅದನ್ನು ದೊಡ್ಡ ಶಬ್ದವನ್ನಾಗಿ ಮಾರ್ಪಡಿಸುವುದಿಲ್ಲವೇ? ಹಾಗೆಯೇ ನಿಮ್ಮ ಅಂಗಾಂಗಳಿಗೆ ಕೊಡುವ ಅಜ್ಞೆಯ ಕ್ಷೀಣವಾದ ಸಂಕೇತವನ್ನು ಈ ಸೋವಿಯತ್ ಯಂತ್ರ ಎತ್ತಿಕೊಂಡು ಅದನ್ನು ಕೃತಿಯ ರೂಪಕ್ಕೆ ಇಳಿಸುತ್ತದೆ.

ಈ ಹೊಸ ಯಂತ್ರದ ಪ್ರಾಯೋಗಿಕ ಉಪಯೋಗ ಏನು ? ಈಗಿನ ಮಟ್ಟಿಗೆ ಅದು ಕೈಯನ್ನು ಕಳೆದುಕೊಂಡಿರುವವರಿಗೆ ಕೃತಕ ಕೈಯ್ಯಾಗಿ ಉಪಯೋಗಕ್ಕೆ ಬರುತ್ತದೆ. ಆದರೆ ಮುಂದೆ ಹೆಚ್ಚಿನ ಉಪಯೋಗಕ್ಕೆ ಅದನ್ನು ಬಳಸಲು ಸಾಧ್ಯವಿದೆ. ಎರಡು ಸ್ವಾಭಾವಿಕ ಕೈಗಳ ಜೊತೆಯಲ್ಲಿ ಒಂದೋ ಎರಡೋ ಕೃತಕ ಕೈಗಳನ್ನೂ ಮನುಷ್ಯನು ಹೊಂದಿಕೊಳ್ಳಬಹುದು. ಸ್ವಾಭಾವಿಕ ಕೈಯಿಂದ ಮಾಡಲಾಗದ ಕೆಲಸಗಳನ್ನೂ ಯಾಂತ್ರಿಕ ಕೈಗಳಿಂದ ಮಾಡಬಹುದು. ಉದಾರಹರಣೆಗೆ, ಈ ಯಾಂತ್ರಿಕ ಕೈಗಳಿಂದ ಸಾಗರದ ತಳದಲ್ಲಿರುವ ವಸ್ತುಗಳನ್ನೂ ಮೇಲೆ ಎತ್ತಬಹುದು; ಕಬ್ಬಿಣ ಕರಗಿಸುವ ಕುಲಿಮೆಯೊಳಗೆ ಈ ಯಾಂತ್ರಿಕ ಕೈಯ್ಯನ್ನು ತುರುಕಬಹುದು; ಅಣು ವಿಕೀರ್ಣವಾಗುವ ಅಪಾಯಕಾರಿ ಸ್ಥಳಗಳಲ್ಲಿ ಈ ಯಾಂತ್ರಿಕ ಕೈ ಮನುಷ್ಯನ ಇಚ್ಛೆಯನ್ನು ಕಾರ್ಯಗತವಾಗಿಸಬಹುದು.

ಮನುಷ್ಯನ ಭಾವನೆಗಳನ್ನು ದೂರಕ್ಕೆ ಪ್ರಸರಣ ಮಾಡುವ ಮತ್ತು ದೂರದಲ್ಲಿ ಕೃತಿಗೆ ತರುವ ಮಾತುಗಳೆಲ್ಲ ಪವಾಡ ಅಥವ ಕುರುಡು ನಂಬಿಕೆ ಎಂದು ಎಣಿಸಲಾಗುತ್ತಿತ್ತು. ಸೋವಿಯತ್ ವಿಜ್ಞಾನವು ಈ ಸಮಸ್ಯೆಯನ್ನು ಪರಿಹರಿಸಿದೆ. ಈ ಶೋಧನೆಯು ಮಾನವನ ಕ್ರಿಯಾಶಕ್ತಿಯನ್ನು ಪ್ರಚಂಡವಾಗಿ ಹೆಚ್ಚು ಮಾಡುವುದೆನ್ನುವುದರಲ್ಲಿ ಅನುಮಾನವಿಲ್ಲ.

ಭಾರತೀಯ ಜನ ಇನ್ನೂ ಕೋಮುವಾರ ಕಲಹಗಳಲ್ಲೇ ಸಾಯುತ್ತಿದ್ದಾರೆ ಎಂದು ತಮ್ಮ 'ಆಪ್ತ' ಪತ್ರಿಕೆ 'ಹಿಂದೂ'ವಿನ ಕತೆಕೊಟ್ಟು ಇವರು ಪ್ರಪ್ರಂಚಕ್ಕೆ ತೋರಿಸುತ್ತಿದ್ದಾರೆ!

ಹೀಗಿದೆ ಸ್ಥಿತಿ !

ಕೇರಳ ಕಾಂಗ್ರೆಸ್ ನಾಯಕರುಗಳು ದೆಹಲಿಗೆ ನಡೆಸಿದ ಯಾತ್ರೆಯ ಪುಣ್ಯ ಅವರಿಗೆ ಏನೇನೂ ಹಿತಕಾರಿಯಾಗಲಿಲ್ಲ. ಆದರೆ ಮುಖ್ಯ ಮಂತ್ರಿ ಶ್ರೀ ನಂಬೂದಿರಿಪಾದ್‌ರವರು ದೆಹಲಿಯಿಂದ ರಾಜ್ಯಕ್ಕೆ ಮರಳುವಾಗ 'ಕೇಂದ್ರವು ತನಿಖೆಯ ಸಾಹಸಕ್ಕೆ ಕೈಹಾಕಲಾರ'ದೆಂಬ ಆತ್ಮ ವಿಶ್ವಾಸದಿಂದ ನಡೆದರು. ಆದರೆ ಕೇರಳ ಕಾಂಗ್ರೆಸ್ ಅಧ್ಯಕ್ಷ ಶ್ರೀ ದಾಮೋದರ ಮೆನೋನ್ ಅಲ್ಲಿ ಎಲ್ಲರ ಕನಿಕರಕ್ಕೆ ಪಾತ್ರರಾಗಿ ನಿರುತ್ಸಾಹದಿಂದ ಮರಳಿದರು. ಅವರಿಗೆ ಅಲ್ಲಿ ದೊರೆತ ಪ್ರೋತ್ಸಾಹನೆಯೆಂದರೆ ಬೇರೆ ಪ್ರಾಂತ್ಯಗಳ ಕಾಂಗ್ರೆಸ್ ನಾಯಕರುಗಳು ಅವರ ಹೇಳಿಕೆಗಳನ್ನು ಶಾಂತರೀತಿಯಿಂದ ಕೇಳಿಕೊಂಡರಷ್ಟೆ. ಅದೂ ಅತ್ಯಂತ ನಿರುತ್ಸಾಹದಾಯಕ, ನಿರಾಶಾದಾಯಕ ಪರಿಸ್ಥಿತಿಯಲ್ಲೇ.

ಅವರು ಕರೆದಿದ್ದ ಲೋಕ ಸಭಾ ಸದಸ್ಯರ ರಹಸ್ಯ ಸಭೆಗೆ ಒಟ್ಟು 400 ಜನ ಸದಸ್ಯರಲ್ಲಿ ಕೇವಲ 70 ಜನ ಮಾತ್ರ ಬಂದಿದ್ದರಂತೆ! ಬೇರೆ ಕಾಂಗ್ರೆಸ್ಸಿಗರಿಗೆ ಕೇರಳ ಕಾಂಗ್ರೆಸ್ ನಾಯಕರ ಹಳೆಯ ಗೋಳಿನ ಅಪಾದನೆಗಳಲ್ಲಿರುವ ಆಸಕ್ತಿಗೆ ಇದು ನಿದರ್ಶನವಾಗಿತ್ತು.

ದೆಹಲಿಯ ಕಮ್ಯೂನಿಸ್ಟ್ ಪಾರ್ಟಿಯವರು ದೆಹಲಿಯ ಟೌನ್ ಹಾಲ್‌ನಲ್ಲಿ ಏರ್ಪಡಿಸಿದ್ದ ಭಾರೀ ಸಭೆಯಲ್ಲಿ ಕಾ॥ ಇ. ಎಂ. ಎಸ್. ಉತ್ಸಾಹದ ಘೋಷಣೆಗಳ ಮಧ್ಯೆ ಭಾಷಣ ಮಾಡಿದರು. ಹೊರಗಡೆ ಜನಸಮೂಹ 90 ನಿಮಿಷಗಳ ವರೆಗೆ ನಿಂತುಕೊಂಡು ನಂಬೂದಿರಿಪಾದ್‌ರ ಭಾಷಣವನ್ನು ಕಿವಿಗೊಟ್ಟು ಕೇಳಿತು.

ಶ್ರೀ ಇ. ಎಂ. ಎಸ್.ರು ಅಲ್ಲಿಯೇ ಪ್ರಶ್ನೆಗಳ ಸುರಿಮಳೆಯನ್ನು ಸುರಿಸುತ್ತಿದ್ದ ಅತ್ಯಂತ ಕಠಿಣವಾದ ಪತ್ರಿಕಾ ಗೋಷ್ಠಿಯಲ್ಲಿ 80 ನಿಮಿಷಗಳ ವರೆಗೆ ಮಾತನಾಡಿದರು. ಶ್ರೀ ದಾಮೋದರ ಮೆನೋನ್‌ರು ಸಾಂಪ್ರದಾಯಿಕವಾಗಿಯಾದರೂ ದೆಹಲಿಯ ಪತ್ರಿಕೋದ್ಯಮಿಗಳನ್ನು ಭೇಟಿ ಮಾಡುವ ಧೀರತೆಯನ್ನು ತೋರಿಸಲಿಲ್ಲ!

—ಪ್ರಶ್ನಾರ್ಥಿ

ಪ್ರಜಾಸತ್ತಾತ್ಮಕ ಶಕ್ತಿ-ಸಂಪಾದನೆಯಲ್ಲಿ ಕೇರಳ ಮುನ್ನಡೆದಿದೆ, ಕೇರಳವು ಇಂದು ಹೆಚ್ಚು ಭದ್ರವಾಗಿದೆ, ಬಲಿಷ್ಠವಾಗಿದೆ

ಭಾರತ ಕಮ್ಯೂನಿಸ್ಟ್ ಪಾರ್ಟಿಯ ಕೇರಳ ಶಾಖೆಯು ಆಗಸ್ಟ್ ೧೪, ೧೫, ೧೬ ರಂದು ಶ್ರೀ ಟಿ. ಸಿ. ನಾರಾಯಣನ್ ನಂಬಿಯಾರ್ ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಸಭೆಯಲ್ಲಿ ಸರ್ವ ಶ್ರೀಗಳಾದ ಅಜಯ್ ಘೋಷ್, ಬಿ. ಟಿ. ರಣದಿವೆ, ಪಿ. ಸಿ. ಜೋಶಿ, ಪಿ. ರಾಮಮೂರ್ತಿ ಅವರುಗಳು ಹಾಜರಿದ್ದರಲ್ಲದೆ ಆಹ್ವಾನದ ಮೇರೆಗೆ ಕೇರಳದ ಕಮ್ಯೂನಿಸ್ಟ್ ಎಂ.ಎಲ್.ಎ. ಗಳೆಲ್ಲರೂ ಆಗಮಿಸಿದ್ದರು. ಈ ಸಭೆ ತ್ರಿವೇಂದ್ರಮ್‌ನಲ್ಲಿ ನಡೆಯಿತು.

ಈ ಮೊದಲು ಇಲ್ಲಿ ಐದು ದಿನ ನಡೆದಿದ್ದ ಕೇಂದ್ರಕಾರ್ಯಕಾರೀ ಸಮಿತಿಯ ಸಭೆಯಲ್ಲಾದ ಚರ್ಚೆ ತೀರ್ಮಾನಗಳನ್ನು ಕುರಿತು ಪ್ರಧಾನ ಕಾರ್ಯದರ್ಶಿ ಶ್ರೀ ಅಜಯ್ ಘೋಷ್‌ರವರು ವಿವರಿಸಿ ಕೇರಳದ ಪರಿಸ್ಥಿತಿಯ ಬಗ್ಗೆ ಸ್ಪಷ್ಟತಿಳುವಳಿಕೆ ನೀಡಿದರು.

ಕೇರಳದಲ್ಲಿ ಕಮ್ಯೂನಿಸ್ಟ್ ನಾಯಕತ್ವದಲ್ಲಿ ವಹಿಸಲ್ಪಟ್ಟಿರುವ ಆಡಳಿತದ ಪ್ರಜಾಸತ್ತಾತ್ಮಕ ಸಾಧನೆಗಳು, ಸುಧಾರಣೆಗಳು, ರಾಜ್ಯದ ದುಡಿಯುವ ವರ್ಗದ ಮುನ್ನಡೆ ಇವುಗಳಲ್ಲಾದ ಗಮನಾರ್ಹ ಸಂಗತಿಗಳ ಬಗ್ಗೆ ವಿಶೇಷ ಗಮನಕೊಟ್ಟ ವಿಷಯವನ್ನು ವಿಶದೀಕರಿಸಿದರು. ಇದರಿಂದ ಕಮ್ಯೂನಿಸ್ಟ್ ಪಾರ್ಟಿಯು ಹೆಚ್ಚು ಶಕ್ತಿಯುತವಾದುದಾಗಿದೆಯೆಂದೂ, ರಾಜ್ಯದ ಜನತೆಯಲ್ಲಿ ಅದರ ಪ್ರಭಾವ ಹೆಚ್ಚು ವಿಸ್ತರಿಸಿದೆಯೆಂದೂ ಅವರು ಹೇಳಿದರು. ಅಷ್ಟೇ ಅಲ್ಲ, ಇದು ಬೇರೆ ರಾಜ್ಯಗಳಲ್ಲೂ ಕೂಡ ಕಮ್ಯೂನಿಸ್ಟ್ ಪಾರ್ಟಿಗಳನ್ನು ದುಡಿಯುವ ವರ್ಗಗಳ ಮಧ್ಯೆ ಹೆಚ್ಚು ಪ್ರಭಾವಶಾಲಿಯಾಗಿಸಲೂ ಮತ್ತು ಪ್ರಾಮಾಣಿಕ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಸಂಪಾದಿಸಲೂ ಹೆಚ್ಚು ಸಹಕಾರಿಯಾಗಿದೆಯೆಂದೂ ತಿಳುಹಿದರು.

ಕೇರಳದಲ್ಲಿ ಇತ್ತೀಚಿಗಿನ ಬೆಳವಣಿಗೆಗಳನ್ನು ಕೇರಳ ಸರ್ಕಾರದ ಈ ಸಾಧನೆಗಳ ಹಾಗೂ ಪಾರ್ಟಿಯ ದೃಷ್ಟಿಯಲ್ಲಿ ನೋಡಬೇಕು. ರಾಜ್ಯದಲ್ಲಿಯ ಸ್ಥಾಪಿತ ಹಕ್ಕುಗಳು ಹಾಗೂ ವಿರೋಧಿ ಪಕ್ಷಗಳ ಪ್ರಚಂಡರು ಕಮ್ಯೂನಿಸ್ಟ್ ನಾಯಕತ್ವದಲ್ಲಿರುವ ಈ ಸರಕಾರದ ಸಾಧನೆಗಳನ್ನು ಕಂಡು ಹತಾಶರಾಗಿ ಕುಪಿತರಾಗಿದ್ದಾರೆ. ಇವರು ಪ್ರಜಾಸತ್ತಾತ್ಮಕ ವಿಧಿನಿಯಮಗಳನ್ನೂ ಗೌರವಗಳನ್ನೂ ಗಾಳಿಗೆ ತೂರಿ ರಾಜ್ಯದಲ್ಲಿ ಸರ್ಕಾರವು ಶಾಂತಿ-ನೆಮ್ಮದಿಗಳನ್ನು ಕಾಪಾಡಲು ಬಲಪ್ರಯೋಗವನ್ನು ಕೈಕೊಳ್ಳುವಂತೆ ಪರಿಸ್ಥಿತಿಯನ್ನು ಹುಟ್ಟಿಸಿ ಕೇರಳವನ್ನು ಪ್ರಜಾಪ್ರಭುತ್ವವಾದಿ ಜನತೆಯಿಂದ ಪ್ರತ್ಯೇಕವಾಗಿಸಲು ಹಾಗೂ ಪರಿಸ್ಥಿತಿಯನ್ನು ಹೆಚ್ಚು ಹೆಚ್ಚಾಗಿ ಕೆಡಿಸಲು ಯೋಜನೆಗಳನ್ನು ಹೊಂಚಿ ಕಾನೂನಿನ ಆಡಳಿತಮುರಿದು ಬಿದ್ದಿದೆ ಎಂಬ ಪ್ರಭಾವವನ್ನು ಬೀರಿ ಭಾರತ ಸರ್ಕಾರವು ಮಧ್ಯೆ ಪ್ರವೇಶಿಸಲು ದಾರಿ ಮಾಡುತ್ತಿದ್ದಾರೆ.

ಈ ಸ್ಥಾಪಿತ ಹಕ್ಕುಗಳ, ರಾಜಕೀಯ ಅಸಕ್ತರ ಹಾಗೂ ಪ್ರತಿಗಾಮಿಗಳ ಈ ಪಿತೂರಿಯು ಅಯಶಸ್ವಿಯಾಗಬೇಕು ಮತ್ತು ಅಯಶಸ್ವಿಯಾಗಿಯೇ ಆಗುತ್ತದೆ. ಶ್ರೀ ಅಜಯ ಘೋಷ್‌ರವರು ಹೀಗೇ ತಮ್ಮ ವರದಿಯನ್ನು ಮುಂದೊರೆಸಿದರು: ಇನ್ನೂ ವಿರೋಧಿ ಪಕ್ಷಗಳ ಪ್ರಭಾವದಲ್ಲಿರುವ ಜನ ಸಮೂಹವನ್ನಾಕರ್ಷಿಸಲು ಕಮ್ಯೂನಿಸ್ಟ್ ಪಾರ್ಟಿಯು ತನ್ನ ರಾಜಕೀಯ ಹಾಗೂ ಜನಸಂಘಟನೆಯ ಕಾರ್ಯಗಳನ್ನು ಇನ್ನೂ ಹೆಚ್ಚು ಹೆಚ್ಚು ಸುಧಾರಿಸಿ ಮುನ್ನಡೆಯಬೇಕು ಮತ್ತು ಅವರಲ್ಲಿ ಸರಕಾರದ ಪ್ರಜಾಸತ್ತಾತ್ಮಕ ಹಾಗೂ ಜನಪ್ರಿಯ ಕ್ರಮಗಳನ್ನು ಬೆಂಬಲಿಸುವಂತೆ ಮಾಡಿ ರಾಜ್ಯದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಬೇಕು. ರೈತರು ವ್ಯವಸಾಯೋತ್ಪತ್ತಿಯನ್ನು ಹೆಚ್ಚಿಸುವಂತೆ ಮಾಡಲು ಸಿದ್ದಗೊಳಿಸುವುದು ಪ್ರತಿಯೊಂದು ಗ್ರಾಮದಲ್ಲಿರುವ ಕಮ್ಯೂನಿಸ್ಟ್ ಪಾರ್ಟಿ ಶಾಖೆಗಳ ಕರ್ತವ್ಯವಾಗಿದೆ.

ಸರಕಾರವು ತನ್ನ ಆಡಳಿತ ಕಾರ್ಯಗಳನ್ನು ಪರಿಷ್ಕರಿಸಿ ಪಂಚವಾರ್ಷಿಕ ಯೋಜನೆಯಲ್ಲಿ ಪಡೆದ ಹಣವನ್ನೆಲ್ಲ ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕು, ಜನತೆಯ ಯಾವದೇ ವಿಭಾಗದಿಂದ ಬರುವ ಜನಪ್ರಿಯ ಹಾಗೂ ಕಾನೂನು ಬದ್ಧ ಬೇಡಿಕೆಗಳನ್ನು ಅತ್ಯಂತ ಸಹಾನುಭೂತಿಯಿಂದ ಪರಿಶೀಲಿಸಿ ತೃಪ್ತಿಕರವಾಗಿ ಸಕಾಲದಲ್ಲಿ ಪೂರೈಸಿಕೊಡಬೇಕು, ಉದ್ರೇಕಕಾರರ, ಗಲಭೆಕೋರರ, ಕಾನೂನು ಭಂಜಕರ ಹಾಗೂ ಹಿಂಸಾಪ್ರಚೋದಕರ ವಿರುದ್ಧ ತೀವ್ರವಾದ ಮುಂಜಾಗ್ರತೆ ಕ್ರಮಗಳನ್ನು ದೃಢಮನಸ್ಕತೆಯಿಂದ ತೆಗೆದುಕೊಳ್ಳಬೇಕು.

ಕಮ್ಯೂನಿಸ್ಟ್ ಪಾರ್ಟಿಯ ಸದಸ್ಯರು ಮತ್ತು ಸ್ನೇಹಿತರು ರಾಜ್ಯದಲ್ಲಿ ಶಾಂತಿಯನ್ನು ಕಾಪಾಡಲು, ಘರ್ಷಣೆಗಳನ್ನು ತಡೆಗಟ್ಟಲು ಅವಿಶ್ರಾಂತವಾಗಿ ಧೀರತೆಯಿಂದ ಕಾರ್ಯಮಾಡಬೇಕು.

ಕಮ್ಯೂನಿಸ್ಟ್ ಪಾರ್ಟಿಯು ರಾಜ್ಯದ ಒಳಗಿನ ಹಾಗೂ ಪ್ರಜಾಪ್ರಭುತ್ವವಾದಿ ಜನರನ್ನು ಜಾಗ್ರತರನ್ನಾಗಿಸಿ ಇದೀಗ ರಾಜ್ಯಾಂಗಬದ್ಧವಾದ ರಾಜ್ಯ ಸರ್ಕಾರದ ಆಡಳಿತ ವ್ಯವಹಾರಗಳಲ್ಲಿ ಕೇಂದ್ರವು ಪ್ರವೇಶಿಸುವದರ ಸೂಕ್ಷ್ಮ ರೂಪವಾದ ಸೂಚಿತ 'ತನಿಖೆ'ಗೆ ವಿರೋಧವಾಗಿ ಅವರನ್ನೆಲ್ಲ ಸಿದ್ದಗೊಳಿಸಬೇಕು.

ರಾಜ್ಯಾದ್ಯಂತ ಅಸಹಕಾರ ಚಳವಳಿಯನ್ನು ಆರಂಭಿಸಲು ಮೊದಲನೆಯದಾಗಿ ಶುರುಮಾಡಿದ್ದ ವಿದ್ಯಾರ್ಥಿ ಚಳುವಳಿಯನ್ನು ಇತ್ಯರ್ಥಗೊಳಿಸುವಲ್ಲಿ ರಾಜ್ಯದ ಸೆಕ್ರೆಟರಿಯಟ್‌ನೊಡನೆ ವಿಚಾರವಿನಿಮಯ ನಡೆಸಿ ಕೈಕೊಂಡ ಕ್ರಮಗಳನ್ನು ಕುರಿತ ವರದಿಯನ್ನು ಶ್ರೀ ಎಂ ಎನ್. ಗೋವಿಂದನ್ ನಾಯರ್‌ರವರು ಒಪ್ಪಿಸಿದರು.

ಈ ಚರ್ಚೆಯ ಕಾಲದಲ್ಲಿ ಸದಸ್ಯರುಗಳು ರಾಜ್ಯದಲ್ಲಿ ವಿರೋಧಿ ಪಕ್ಷಗಳವರು, ಪಟ್ಟಭದ್ರ ಹಿತಗಳವರು ಹಿಂಸೆ, ಗಲಭೆಗಳ ಪ್ರಚೋದನೆಯಲ್ಲಿ ಕೈಕೊಂಡ ಗತ್ತುಗಾರಿಕೆಗಳನ್ನೆಲ್ಲ ವಿವರಿಸಿದರು.

ಕಾರ್ಯಕಾರೀ ಸಮಿತಿಯ ತೀರ್ಪು

ಸಮಿತಿಯು ವಿವರ ಪೂರ್ಣವಾದ ಚರ್ಚೆಯ ಬಳಿಕ ರಾಜ್ಯಸಮಿತಿಯ ಸೆಕ್ರೆಟರಿಯೇಟ್ ಮತ್ತು ಕೇರಳ ಸರ್ಕಾರವು ವಿದ್ಯಾರ್ಥಿ ಚಳುವಳಿಯನ್ನು ಇತ್ಯರ್ಥಗೊಳಿಸುವ ಬಗ್ಗೆ ಕೈಕೊಂಡ ಕ್ರಮಗಳಿಗೆ ತನ್ನ ಒಪ್ಪಿಗೆಯನ್ನು ನೀಡಿತು.

ಸಮಿತಿಯು ಕೇರಳ ಸರ್ಕಾರವು ಗ್ವಾಲಿಯರ್ ರೇಯಾನ್ಸ್ ಕಂಪೆನಿ (ಬಿರ್ಲಾ) ಯೊಂದಿಗೆ ಮಾಡಿಕೊಂಡಿದ್ದ ಒಪ್ಪಂದವನ್ನು ಕ್ರಮವಾಗಿ ಚರ್ಚಿಸಿತು ಮತ್ತು ಹಲವು ನಿಬಂಧನೆಗಳನ್ನು ಟೀಕಿಸಿ ಕೊನೆಗೊಂದು ಗೊತ್ತುವಳಿಯನ್ನು ಅಂಗೀಕರಿಸಿತು.

ಸಮಿತಿಯು ಆಮೇಲೆ ಇನ್ನೊಂದು ಗೊತ್ತುವಳಿಯನ್ನು ಅಂಗೀಕರಿಸಿ ಕಮ್ಯೂನಿಸ್ಟ್ ಪಾರ್ಟಿಯ ಸದಸ್ಯರು ಹಾಗೂ ಸ್ನೇಹಿತರು ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಹಣಕೂಡಿಸಿ ನೆರೆಹಾವಳಿಯಿಂದ ಹೊಲ ಮನೆಗಳ ನಷ್ಟಕ್ಕೆ ಗುರಿಯಾಗಿರುವವರಿಗೆ (ಎರ್ನಾಕುಲಂ, ಕೊಟ್ಟಾಯಂ, ಅಲೆಪ್ಪಿ ಮತ್ತು ಕ್ವಿಲೋನ್ ಜಿಲ್ಲೆಗಳು) ಸಹಾಯನೀಡಲು ಕರೆಕೊಟ್ಟಿತು.

ಪ್ರಪಂಚ ಪ್ರಖ್ಯಾತ ಅಣು ವಿಜ್ಞಾನಿ ಹಾಗೂ ಪ್ರಪಂಚ ಶಾಂತಿ ಸಮಿತಿಯ ಅಧ್ಯಕ್ಷರಾದ ಪ್ರೊ. ಜೋಲಿಯೋ ಕ್ಯೂರಿಯವರ ನಿಧನದ ಬಗ್ಗೆ ತನ್ನ ಶೋಕವನ್ನು ವ್ಯಕ್ತಪಡಿಸಿ ಗೊತ್ತುವಳಿಯೊಂದನ್ನು ಸ್ವೀಕರಿಸಿತು.

ಸಮಿತಿಯು ರಾಜ್ಯದಲ್ಲಿ ಕಮ್ಯೂನಿಸ್ಟ್ ಪಾರ್ಟಿ ಹಾಗೂ ಸರ್ಕಾರವು ತನ್ನ ಕಾರ್ಯಗಳಲ್ಲಿ ಕೈಕೊಳ್ಳಲು ಹಲವು ನಿರ್ದೇಶನಗಳನ್ನಿತ್ತಿತು. ಈ ನಿರ್ದೇಶನಗಳು ಸೆಪ್ಟಂಬರ್ ತಿಂಗಳಲ್ಲಿ ಮತ್ತೆ ಸೇರುವ ಸಮಿತಿಯ ಸಭೆಯಲ್ಲಿ ಚರ್ಚಿಸಲ್ಪಡುವವು.

ಬಲಿದಾನದ ಹಿಂದೆ...

(೪ನೇ ಪುಟದಿಂದ)

ಹಾರಿಸುತ್ತಿದ್ದರು. ತಕ್ಷಣ ಗೋಲಿಯೊಂದು ಸಿಡಿದು ಮುಂದಾಗಿ ಬರುತ್ತಿದ್ದ ರಾಜಣ್ಣನ ಎದೆಗೆ ತಾಕಿತು. ಎಲ್ಲೆಲ್ಲೂ ಚೀತ್ಕಾರ; ಕಿರುಚಾಟ............ಕುಸಿದು ಬಿದ್ದ ರಾಜಣ್ಣನನ್ನು ಪೋಲೀಸರು ಆಸ್ಪತ್ರೆ ಕಡೆ ಕೊಂಡೊಯ್ದರು.

ರಾತ್ರಿ ಹತ್ತು ಗಂಟೆ ಸಮಯ....ಮಳೆ ಹನಿ ತುಂತುರು ತುಂತುರಾಗಿ ಬೀಳುತ್ತಿತ್ತು. ರಸ್ತೆಯಲ್ಲಿ ಜನರ ಗದ್ದಲ ಕಡಿಮೆಯಾಗಿತ್ತಾದರೂ ಆಗಾಗ್ಗೆ ವಾಹನಗಳ ಶಬ್ದ ನೀರವತೆಯನ್ನು ಕದಡುತ್ತಿದ್ದುವು. ರಾಜಣ್ಣನು ಇನ್ನೂ ಮನೆಗೆ ಬಾರದ್ದು ಪಾರ್ವತಿಗೆ ಕಳವಳವನ್ನು ಹುಟ್ಟಿಸಿತ್ತು. ಅವಳ ಮನದ ಉದ್ವೇಗ ಹೆಚ್ಚಿದಂತೆಲ್ಲಾ ನಿಟ್ಟುಸಿರುಬಿಟ್ಟು, ವಿಶಾಲವಾದ ರಸ್ತೆಯೆಡೆಗೆ ದೃಷ್ಟಿಹರಿಸುವಳು. ತನ್ನ ಪತಿಯ ಸುಳಿವಿಲ್ಲದಿರುವುದನ್ನು ತಿಳಿದು ಖಿನ್ನಮನಸ್ಕಳಾಗಿ ಹಿಂದಿರುಗಿ ಮನೆಯೊಳಕ್ಕೆ ನಡೆಯುವಳು. ಮನಸ್ಸಿನ ಹೊಯ್ದಾಟ ಹೆಚ್ಚಿದಂತೆಲ್ಲಾ ಬಾಗಿಲ ಬಳಿ ಧಾವಿಸಿ ಬಂದು ತನ್ನಿನಿಯನನ್ನ ದೃಷ್ಟಿಪೂರಿತವಾಗಿ ವೀಕ್ಷಿಸುವಳು. ಅಗೋ ಬರುವರು! ಇನ್ನೇನು ಬಂದಾರು ಎಂಬ ಆಸೆಯಿಂದ ತನ್ನ ಪತಿಗಾಗಿ ಬಾಗಿಲ ಬಳಿ ಕಾದು ನಿಂತಿದ್ದಳು.

ಟಪ್! ಟಪ್!!......ಯಾರೊ ಬಾಗಿಲು ಬಡಿದಂತಾಯಿತು. ಯೋಚನೆಯಲ್ಲೆ ಇದ್ದ ಪಾರ್ವತಿಗೆ ತನ್ನ ಪತಿಯು ಬಂದಿರಬಹುದೆಂಬ ಆಸೆಯ ಕುಡಿಕಾಣಿಸಿಕೊಂಡಿತು. ಬಾಗಿಲು ತೆಗೆದ ರಭಸಕ್ಕೆ ನುಗ್ಗಿದ ಗಾಳಿ ಮನೆಯೊಳಗೆ ಉರಿಯುತ್ತಿದ್ದ ದೀವಿಗೆಯನ್ನಾರಿಸಿತು. ತಕ್ಷಣ ದೀಪ ಅಂಟಿಸಲು ಹೋದಾಗ, ಅಪರಿಚಿತರು ಬಿಟ್ಟ ಬ್ಯಾಟರಿ ಬೆಳಕಿಗೆ ಪಾರ್ವತಿ ಅಧೀರಳಾದಳು.

"ಎಯ್! ನಿನ್ನ ಗಂಡನ ಕಾಲಿಗೆ ಏಟು ಬಿದ್ದಿದೆ ಆಸ್ಪತ್ರೆಗೆ ಬರುವುದಿದ್ರೆ ಬಾ" ಎಂದು ಪೋಲಿಸಿನವನೊಬ್ಬ ಹೇಳಿದ. ಪಾರ್ವತಿ ಗಾಬರಿಯಾದಳು. ಕಂಠ ಬಿಗಿದು ಬಂತು. ಮೂಕಿಯಂತೆ ತನ್ನ ಪತಿಯನ್ನು ನೋಡಲು ಪೋಲೀಸರನ್ನು ಹಿಂಬಾಲಿಸಿದಳು.

ಆಸ್ಪತ್ರೆಯ ಒಳಗಡೆ, ನೀರವತೆ ಆವರಿಸಿತ್ತು. ಕೆಲವು ಕೊಠಡಿಗಳನ್ನು ಹಾದು ಹೋದ ನಂತರ ಅವಳಿಗೆ ತನ್ನ ಪತಿಯು ಮಲಗಿರುವ ಮಂಚವನ್ನು ತೋರಿಸಲಾಯ್ತು. ಅಲ್ಲಿಯ ದೃಶ್ಯವನ್ನು ನೋಡಿ ಅವಳ ಜಂಘಾಬಲವೆಲ್ಲಾ ಉಡುಗಿಹೋಯಿತು, ಕಂಠ ಬಿಗಿದು ಬಂದಂತೆಲ್ಲಾ ಕಣ್ಣುಗಳು ಮಂಜು ತುಂಬಿದವು.

ಮಂಚದ ಪಕ್ಕದಲ್ಲೇ ನಿಂತಿದ್ದ ತನ್ನ ಪತಿಯನ್ನು ರಾಜಣ್ಣ ಕಡೆಯದಾಗಿ ಕಣ್ತುಂಬ ನೋಡಿದ, ಮಾತಾಡಬೇಕೆಂಬ ಬಯಕೆ ಬಹಳವಾಗಿತ್ತು. ಆದರೆ, ಮೇಲೇಳಲಾಗಲಿಲ್ಲ. ಮಾತಾಡಲಾಗದೆ ಅವಳ ಕೈ ನೇವರಿಸಿದ........ಅವನ ಹೃದಯಕ್ಕಾಗಿರುವ ಅಘಾತವೂ, ಪಾರ್ವತಿಯ ಹೃದಯಕ್ಕಾಗಿರುವ ನೋವೂ ಒಂದೇ ಆಗಿದ್ದಿತು. ಎಲ್ಲರೂ ನೋಡುತ್ತಿದ್ದಂತೆಯೇ ಆತನ ಕತ್ತು ಕೆಳಕ್ಕೊರಳಿತು....ಅವನೆದೆಗೆ ಕಟ್ಟಿದ್ದ ಪಟ್ಟಿಯ ಮೇಲೆ ಪಾರ್ವತಿಯ ಕಾದ ಕಣ್ಣೀರು ಪಳಪಳನೆ ಉದುರಿತು. ಅವಳಿಗೆ ಮಾತಾಡಲು ಬಾಯಿಬರಲಿಲ್ಲ. ಗದ್ಗದ ಸ್ವರದಿಂದ ಕಂಪಿಸುತ್ತಿದ್ದಳು........

೦ ೦ ೦

ಒಂದು ಕಡೆ ರಾಜಣ್ಣನ ಸ್ನೇಹಿತರು ಒಂದು ಬಲಿದಾನವಾಯಿತೆಂದು ತಮ್ಮ ಸಂತಾಪ ಸೂಚಿಸುತ್ತಿದ್ದರು.

ರಾಜಣ್ಣನ ಬಲಿದಾನದ ಸಂಕಟದಲ್ಲಿ ಅಕ್ಷರಶಃ ವಾಸ್ತವಿಕವಾಗಿ ಪಾಲ್ಗೊಂಡಿದ್ದ ಪಾರ್ವತಿಯು ಇನ್ನು ಅದೆಷ್ಟೊ ಸಂಕಟಪಡುವ ಸ್ತ್ರೀಯರ ಜೀವಂತ ಸಾಂಕೇತವಾಗಿ ಶಿಲಾಮೂರ್ತಿಯಾಗಿ ಕುಳಿತಿದ್ದಳು.

ದಾಂಡೇಲಿಯಲ್ಲಿ ನಾಗರಿಕ ಆಡಳಿತವಿಲ್ಲ — ಅರಣ್ಯ ಖಾತೆಯವರ 'ಕಾಡಾಡಳಿತ'

ಪ್ರಾಂತೀಯ ಸುದ್ದಿ ಸಂಗ್ರಹ

ದಾಂಡೇಲಿಯು ಭರದಿಂದ ಬೆಳೆಯುತ್ತಿರುವ ಒಂದು ಔದ್ಯೋಗಿಕ ನಗರ. ಉತ್ತರ ಕನ್ನಡ ಜಿಲ್ಲೆಯ ಔದ್ಯೋಗಿಕ ಕೇಂದ್ರವಾಗುವ ಸ್ಥಳ. ಆದರೆ ಆಶ್ಚರ್ಯವೆಂದರೆ ಇಲ್ಲಿ ರೆವಿನ್ಯೂ ಅಧಿಕಾರಿಗಳ ಆಟವೇನೂ ನಡೆಯದು. ಕಾರಭಾರವೆಲ್ಲ ಅರಣ್ಯ ಖಾತೆಯವರದು. ಅರಣ್ಯ ಖಾತೆಯವರ ಆಡಳಿತವನ್ನು ತೋರಿಸಲು ಇಲ್ಲಿ ಕೆಲವು 'ಕಾಡು ನಿದರ್ಶನ' ಗಳಿವೆ ನೋಡಿ.

○ ಅರಣ್ಯಖಾತೆಯವರು ಮನೆಗಳನ್ನು ಕಟ್ಟಿಕೊಳ್ಳಲು ಕೇವಲ ಸಾಹುಕಾರರಾದವರಿಗೆ ಮಾತ್ರ ಸ್ಪೆಷಲ್ ಕೇಸ್ ಎಂದು ಸ್ಥಳ ಕೊಡುತ್ತಾರೆ. ಟೌನ್ ಪ್ಲಾನಿಂಗ್ ಆದ ಬಳಿಕ ನಿಮಗೆ ಸ್ಥಳ ಕೊಡಲಾಗುವುದು ಎಂದು ಇಲ್ಲಿಯ ದುಡಿಯುವ ಬಡಜನಗಳಿಗೆ ಹೇಳಲಾಗುವುದು. ಇದು ಎಲ್ಲರಿಗೂ ಒಂದೇ ಬಗೆಯಾಗಿ ಅನ್ವಯಿಸಬೇಕಲ್ಲವೆ?

○ ಬಡವರ ಜೋಪಡಿಗಳು ನರಕದ ಸ್ಥಿತಿಯಲ್ಲಿವೆ. ಶೌಚಕೂಪಗಳಿಲ್ಲದೆ ಹೇಸಿಗೆಯ ಗುಂಪೆಗಳು ಬೆಟ್ಟದಂತೆ ಬಿದ್ದಿವೆ. ಬಡವರು ಹಂದಿ—ನಾಯಗಳ ಬಾಳನ್ನು ಬದುಕಬೇಕಾಗಿದೆ. ಅಧಿಕಾರಿ ವರ್ಗದವರಿಗೆ ಮತ್ತು ಶ್ರೀಮಂತರಿಗೆ ಥಳ ಥಳಿಸುವ ಸಂಗಮವರೀ ಕಲ್ಲಿನ ಶೌಚಕೂಪಗಳು ನಿರ್ಮಿಸಲ್ಪಟ್ಟಿದ್ದು ಸಾಧಾರಣವಾದ ಶೌಚಕೂಪಗಳೂ ಬಡವರಿಗಿಲ್ಲದಾಗಿವೆ.

○ ಫಾರೆಸ್ಟ್ ಅಧಿಕಾರಿಗಳ ಮನೆಗಳಲ್ಲಿ ವಿದ್ಯುದ್ದೀಪಗಳು ಝಗ ಝಗಿಸುತ್ತಿದ್ದರೆ ಕಾರ್ಮಿಕರ ಮನೆಗಳಿಗೆ ಬೇಡ, ಅಲ್ಲಿಯ ಬೀದಿಗಳಿಗೆ ಒಂದಾದರೂ ದೀಪವಿಲ್ಲದೆ ರಾತ್ರಿಯ ಕಗ್ಗತ್ತಲು ಭಯಂಕರವಾಗಿರುತ್ತದೆ. ಕೆಲಸಗಾರರು ರಾತ್ರಿ ಸಾಯುತ್ತ ಬೀಳುತ್ತ ಪಾಳಿಗೆ ಹೋಗಬೇಕಾಗಿರುವಾಗ ಅಧಿಕಾರಿಗಳು ಮಾತ್ರ ಮಜಾ ಮಾಡಲು ಬೆಳಕು ಬೇಕಾಗಿದೆ ಇಲ್ಲಿ.

○ ನೀರಿನ ವ್ಯವಸ್ಥೆಯನ್ನಂತೂ ಕೇಳುವುದೇ ಬೇಡ. ಬಂಗ್ಲೆಗಳಿಗೆ ನಲ್ಲಿಗಳಿಲ್ಲದಿದ್ದರೆ ಅವರು ಫೈಯರ್ ಫೈಟರ್ ಗಾಡಿಗಳಲ್ಲಿಂದ ನೀರು ಎತ್ತುತ್ತಾರೆ. ಬಡವರು ಸಾಯುತ್ತೇವೆಂದರೂ ಮುಕ್ಕು ನೀರು ಸಿಗದು.

ಈ ಅರಣ್ಯಾಡಳಿತವನ್ನು ಹೋಗಲಾಡಿಸಲು ಮೈಸೂರಿನ ನಾಗರಿಕ ಸರ್ಕಾರಕ್ಕೆ ಸಾಧ್ಯವಿದೆಯೆ?

'ಜೈ ಹಿಂದ್ ಸಾ ಮಿಲ್ಲು' ಹದಗೆಟ್ಟು ಹಾಳಾಗಿ ಹೋಗುತ್ತಿದೆ

ದಾಂಡೇಲಿಯಲ್ಲಿರುವ ಮೈಸೂರು ಸರಕಾರದ ಜೈಹಿಂದ್ ಸಾ ಮಿಲ್ಲು ತನ್ನ ಆಡಳಿತ ನೀತಿಯಲ್ಲಿಯ ಅಪರಾಧಗಳಿಂದಾಗಿ ಹದಗೆಟ್ಟು ಹಾಳಾಗಿ ಹೋಗುತ್ತಿರುವುದು ಶೋಚನೀಯವಾಗಿದೆ. ಇದರ ಹೊಣೆಯನ್ನು ಕೇವಲ ಕಾರ್ಮಿಕರ ಮೇಲೆ ಹೊರಿಸಿ, ಅಧಿಕಾರಿ ವರ್ಗದ ಅಪರಾಧಗಳನ್ನು ಬಚ್ಚಿಟ್ಟು ಸುಮ್ಮನೆ ಕೂಡುವುದೇ ಸರಕಾರದ ಧೋರಣೆಯೆಂದು ತೋರುತ್ತದೆ. ನೋಡಿ, ಇದನ್ನೊಂದಿಷ್ಟು ನೋಡಿ ಹಾಗಾದರೆ:

ಈಗ ಎರಡು ಮೂರು ವರ್ಷಗಳ ಹಿಂದೆ ಫಾರೆಸ್ಟ್ ಇಂಜನಿಯರಿಂಗ್ ಡಿವಿಜನ್ನಿನ ಮುಖ್ಯಾಧಿಕಾರಿ ಫಾರೆಸ್ಟ್ ಇಂಜನೀಯರನ್ನೂ ಹಾಗೂ ಮಿಲ್ಲಿನ ವರ್ಕ್‌ಷಾಪ್—ಇನ್‌ಚಾರ್ಜ್ ಮೆಕ್ಯಾನಿಕಲ್ ಓವರ್‌ಸೀಯರನ್ನೂ ಸಸ್ಪೆಂಡು ಮಾಡಲಾಯಿತಷ್ಟೆ. ಫಾರೆಸ್ಟ್ ಇಂಜನೀಯರ್‌ರ ಸ್ಥಳದಲ್ಲಿ ಒಂದಿಷ್ಟೂ ತಾಂತ್ರಿಕ ಜ್ಞಾನವಿಲ್ಲದ ಡಿವಿಜನಲ್ ಫಾರೆಸ್ಟ್ ಆಫೀಸರೆಂಬವರನ್ನು ಇನ್‌ಚಾರ್ಜ್ ಮಾಡಲಾಗಿದೆ ಮತ್ತು ಮೆಕ್ಯಾನಿಕಲ್ ಓವರ್‌ಸೀಯರರ ಸ್ಥಳಕ್ಕೆ ಮಿಲ್ ಫೋರ್‌ಮನ್‌ನಿಗೆ ಆಡಿಷನಲ್ ಚಾರ್ಜ್ ಕೊಡಲಾಯಿತು. ಯಂತ್ರಗಳ ಒಂದಿಷ್ಟೂ ಜ್ಞಾನವಿಲ್ಲದ ಡಿ.ಎಫ್. ಓ. ರವರು ಇನ್‌ಚಾರ್ಜ್ ಆದ ಮೂಲಕ ಯಂತ್ರಗಳು ಒದರ ಹತ್ತಿವೆ. ಇದೇನಾದರೂ ಮಂತ್ರಿಗಳ ಕಿವಿಗೆ ಕೇಳಿದೆಯೆ?

ತಮಗೆ ತಾಂತ್ರಿಕ ಜ್ಞಾನವಿಲ್ಲದ ಈ ಮಹಾಶಯರು ದಿನನಿತ್ಯ, ಬರೀ ಕಾರ್ಮಿಕರ ಮೇಲೆ ಹರಿಹಾಯ್ದರೆ ಕಾರ್ಮಿಕರು ಏನು ಮಾಡಬೇಕು? ಈ ಸಾಹೇಬರ ಕೈಕೆಳಗೆ ಟೆಕ್ನಿಕಲ್ ಜನ ಕೆಲಸ ಮಾಡುವುದೇ ಕಷ್ಟವಾಗಿದೆ.

ತಾ. ೧—೮—೫೮ರಂದು ಈ ಮಿಲ್ಲಿನ ಫೋರ್‌ಮನ್ನರು ಡಿ. ಎಫ್. ಓ.ರವರ ಜುಲೂಮ್ ನೀತಿಯನ್ನು ತಾಳಲಾರದೆ ರಜೆಯ ಮೇಲೆ ಹೊರಟುಹೋದರು. ಇವರ ಸ್ಥಳದಲ್ಲಿ ಟ್ರಾಕ್ ವ ಟ್ರಾಕ್ಟರ್ ಮೇಲೆ ಇರುವ ಅಫಿಸಿಯೇಟಿಂಗ್ ಫಾರೆಸ್ಟರನ್ನು ಮೆಕ್ಯಾನಿಕಲ್ ಓವರ್‌ಸೀಯರ್‌ರೆಂದು ನಿಯಮಿಸಲಾಯಿತು. ಇವರಿಗೂ ಟೆಕ್ನಿಕಲ್ ಜ್ಞಾನ ಶೂನ್ಯ. ಫಾರೆಸ್ಟ್

(೮ನೇ ಪುಟ ನೋಡಿ)

ಸರ್ಕಾರದ ತಿಳಿಗೇಡಿ ನೀತಿಯೆ ಇಂದಿನ ಆಹಾರ ಪರಿಸ್ಥಿತಿಗೆ ಕಾರಣ

— ಶಿವಮೊಗ್ಗೆಯಲ್ಲಿ ಬಹಿರಂಗ ಸಭೆ —

ಶಿವಮೊಗ್ಗ: ಆಗಸ್ಟ್ ೧೫, ೧೬, ೧೭ ಈ ಮೂರು ದಿನಗಳ ಕಾಲ ಶಿವಮೊಗ್ಗೆಯಲ್ಲಿ ಜಿಲ್ಲಾ ಪಾರ್ಟಿ ಕಾರ್ಯಕರ್ತರಿಗೆ ಕಮ್ಯೂನಿಸ್ಟ್ ಪಾರ್ಟಿಯ ಬಗ್ಗೆ ತಿಳುವಳಿಕೆ ನೀಡಲು ಪಾರ್ಟಿ ಸ್ಕೂಲನ್ನು ನಡೆಸಲಾಯಿತು.

ಕರ್ನಾಟಕ ಪ್ರಾಂತ ಕಮ್ಯೂನಿಸ್ಟ್ ಪಾರ್ಟಿಯ ಕಾರ್ಯದರ್ಶಿ ಕಾ|| ಎನ್. ಎಲ್. ಉಪಾಧ್ಯಾಯರು ಮತ್ತು ಕರ್ನಾಟಕ ಪ್ರಾಂತ್ಯ ಕಿಸಾನ ಸಭೆಯ ಕಾರ್ಯದರ್ಶಿ ಕಾ|| ಬಿ. ವಿ. ಕಕ್ಕಿಲ್ಲಾಯ ಅವರುಗಳು ಕ್ಲಾಸ್ ನಡೆಸಿದರು.

ಅಮೃತ್‌ಸರ್ ಅಧಿವೇಶನದಲ್ಲಿ ಸ್ವೀಕೃತವಾದ ರಾಜಕೀಯ ಗೊತ್ತುವಳಿಗಳ ಮೇಲೆ ಮುಖ್ಯವಾಗಿ ವ್ಯಾಸಂಗ ಮಾಡಲಾಯಿತು.

ಕೊನೆಯ ದಿನ ಕರ್ನಾಟಕ ಸಂಘದ ಕಟ್ಟಡದಲ್ಲಿ ಬಹಿರಂಗ ಸಭೆಯು ತರುಣ ವಕೀಲರಾದ ಶ್ರೀ ಬಿ. ಎನ್. ಎ. ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಜಿಲ್ಲಾ ಕಾರ್ಯದರ್ಶಿ ಕಾ|| ಚಂದುಕುಟ್ಟಿಯವರು ಸಭಿಕರನ್ನು ಸ್ವಾಗತಿಸಿದರು.

ಕಾ|| ಉಪಾಧ್ಯಾಯರು ಮಧ್ಯಪ್ರಾಚ್ಯಾದ ಸ್ಥಿತಿಗತಿಗಳನ್ನು ಕುರಿತು ವಿವರಪೂರ್ಣವಾದ ಭಾಷಣ ಮಾಡಿ ಶಾಂತಿಸ್ಥಾಪನೆಗೆ ಭಾರತವು ಕೈಕೊಳ್ಳುವ ಎಲ್ಲಾ ಕ್ರಮಗಳಿಗೂ ಪುರೋಗಾಮಿ ಶಕ್ತಿಗಳೆಲ್ಲ ಬೆಂಬಲ ಕೊಡಬೇಕೆಂದು ಕೇಳಿಕೊಂಡರು.

ಆಂತರಿಕವಾಗಿ ಭಾರತ ಸರ್ಕಾರದ ಜನತಾ ವಿರೋಧಿ ನೀತಿಗಳನ್ನು ಶ್ರೀ ಉಪಾಧ್ಯಾಯರು ಕಟುವಾಗಿ ಖಂಡಿಸಿ ಇಷ್ಟು ದಿನಗಳಾದರೂ ಆಹಾರ ಪರಿಸ್ಥಿತಿ ಸುಧಾರಿಸದಿರುವುದು, ಭೂಸುಧಾರಣಾ ಶಾಸನಗಳು ಜಾರಿಗೆ ಬಾರದಿರುವುದು ನಮ್ಮ ಸರಕಾರಗಳ ತಿಳಿಗೇಡಿ ನೀತಿಯನ್ನು ತೋರಿಸುತ್ತಿದೆಯೆಂದೂ ಇವುಗಳ ಸುಧಾರಣೆಗೆ ಹಾಗೂ ಇವುಗಳನ್ನು ಜಾರಿಗೆ ತರಲು ಜನರ ಒತ್ತಾಯ ಬಲಪಡಬೇಕೆಂದೂ ಅವರು ಕರೆಕೊಟ್ಟರು.

ಕಾ|| ಕಕ್ಕಿಲ್ಲಾಯರು ಕೇರಳದಲ್ಲಿ ಕಮ್ಯೂನಿಸ್ಟ್ ಸರಕಾರ ಸಾಧಿಸಿರುವ ಯಶಸ್ಸುಗಳನ್ನು ವಿವರಿಸಿ ರೈತರಿಗೂ ಕಾರ್ಮಿಕರಿಗೂ ಕಮ್ಯೂನಿಸ್ಟ್ ಸರಕಾರದಿಂದಾಗುತ್ತಿರುವ ಪ್ರಯೋಜನಗಳನ್ನು ಕಾಂಗ್ರೆಸ್ ರಾಜ್ಯಗಳೊಂದಿಗೆ ತುಲನೆಮಾಡಿ ಹೇಳಿದರು. ಕೇರಳದಲ್ಲಿಯ ಇತ್ತೀಚಿಗಿನ ಪ್ರಸಂಗಗಳ ನೆವದಿಂದ ಕೇಂದ್ರವು ಕೈ ಹಾಕುವುದನ್ನು ತಡೆಗಟ್ಟುವುದು ಪ್ರತಿಯೊಬ್ಬ ಪ್ರಜಾಪ್ರಭುತ್ವವಾದಿಯ ಕರ್ತವ್ಯವಾಗಿದೆಯೆಂದು ಕರೆ ಕೊಟ್ಟರು.

ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಬಾಗಲಕೋಟೆಯಲ್ಲಿ ಟ್ರಕ್‌ಗಳ ಮೇಲೆ ಪೋಲಿಸ್ ಫೌಜದಾರರ ಧಾಳಿ

ಬಾಗಲಕೋಟ ಶಹರ ಪೋಲೀಸರು ಇಲ್ಲಿಯ ಟ್ರಕ್ಕುಗಳ ಒಡೆಯರ ಮೇಲೆ ಹಾಗೂ ಡ್ರಾಯವ್ಹರ ಜನರ ಮೇಲೆ ಅನ್ಯಾಯವಾಗಿ ನಾನಾ ತರದ ದಬ್ಬಾಳಿಕೆಯನ್ನು ನಡೆಸುತ್ತಿದ್ದಾರೆ.

ತಾ. 19—8—58ರಂದು ಇಲ್ಲಿಯ ಒಂದು ಟ್ರಕ್ ನಂ. MYZ 621ರ ಮಾಲಿಕರಾದ ಶ್ರೀ ನಾರಾಯಣಸ್ವಾಮಿ ಮಗ ಹರಿಹರ ಎಂಬವರನ್ನು ಇಲಕಲ್‌ದಿಂದ ಟ್ರಕ್ ತೆಗೆದುಕೊಂಡು ಬರುವಾಗ್ಗೆ ಸಂಜೆ 8 ಘಂಟೆ ಸುಮಾರಿಗೆ ಅಡಿಶಿನಲ್ (2nd) ಫೌಜದಾರರಾದ ಶ್ರೀ ಸವದತ್ತಿ ಇವರು ಟ್ರಕ್ ತಡೆದು ಮಾಮೂಲಿ ಬೇಡಿದಾಗ ಶ್ರೀ ಹರಿಹರ ಇವರು ಪ್ರತೀಕಾರ ಮಾಡಲಾಗಿ "ನೀನು ದಾರು ಕುಡಿದೀದಿ ನಿನಗೆ ದಸ್ತಗೀರಿಮಾಡಿ ತಪಾಸಣೆ ದಸಿಂದ ದವಾಖಾನೆಗೆ ಒಯ್ಯುತ್ತೇನೆ" ಅಂತಾ ಬೆದರಿಸಿ ಸರಕಾರಿ ದವಾಖಾನೆಗೆ ಡಾಕ್ಟರರ ಹತ್ತರ ಒಯ್ಯಲಾಗಿ, ಡಾಕ್ಟರ ಶ್ರೀ ಹರಿಹರ ಇವರನ್ನು ತಪಾಸಣೆ ಮಾಡಿ ಇವರು ದಾರು ವಗೈರೆ ಕುಡಿದಿಲ್ಲಾ ಅಂತಾ ಹೇಳಿದರು. ನಂತರ ಪುನಃ ಶ್ರೀ ಸವದತ್ತಿ ಫೌಜದಾರರು ಬೆದರಿಸಿ ಶ್ರೀ ಹರಿಹರ ಇವರಿಗೆ ಪೋಲಿಸ ಠಾಣೆಗೆ ಕರೆದೊಯ್ದು ಮನಸ್ಸಿಗೆ ಬಂದಂತೆ ಅವಾಚ್ಯ ಬೈಗಳ ಬೈದು ಹೊಡೆದು ಲಾಕಪ್ಪಿನಲ್ಲಿ ಹಾಕಿ ದೌರ್ಜನ್ಯ ನಡಿಸಿದ್ದಾರೆ. ಇನ್ನೂ ವರೆಗೂ ಟ್ರಕ್ ಪೋಲಿಸ್ ಕಚೇರಿಯಲ್ಲಿಯೇ ಬಿದ್ದಿದೆ. ದಿನಾಲು ನೂರಾರು ರೂಪಾಯಿಗಳ ಹಾನಿ ಆಗಹತ್ತಿದೆ. ಇದಕ್ಕೆ ಹೊಣೆಗಾರರು ಯಾರು?

ಈ ರೀತಿಯಾಗಿ ಪೋಲಿಸರ ದಬ್ಬಾಳಿಕೆ ನಗರದಲ್ಲಿ ನಿರಂತರವಾಗಿ ನಡೆದಿದೆ. ಮೇಲಾಧಿಕಾರಿಗಳು ಕೂಡಲೇ ಇತ್ತ ಗಮನಿಸಿ ಈ ಪೋಲಿಸ ಫೌಜದಾರರಿಂದ ಅನ್ಯಾಯ, ಅತ್ಯಾಚಾರ, ದಬ್ಬಾಳಿಕೆ ಬಗ್ಗೆ ಕೂಡಲೇ ವಿಚಾರಣೆ ನಡೆಸಬೇಕು.

ಮೋಟರ ಒಡೆಯರಿಗೆ ಡ್ರಾಯವ್ಹರರಿಗೆ ನ್ಯಾಯ ಸಿಗಲಿ.

ಲಂಚ — ಹಿಂಸೆ

ಯಾರಾದರೂ ಜಾಮೀನ ಆಗಲು ಹೋದರೆ ಅವರನ್ನು ಹಿಡಿದು ಲಾಕಪ್ಪಿನಲ್ಲಿ ಹಿಡಿದು ಹಾಕು ಅನ್ನುತ್ತಾರೆ. ಈ ರೀತಿಯ ದಬ್ಬಾಳಿಕೆಯಿಂದ ಜನರು ಭಯಭೀತರಾಗಿದ್ದಾರೆ. ಯಾರ ಮಾನ ಯಾವ ಹೊತ್ತಿನಲ್ಲಿ ಹೋಗುತ್ತದೆ ಎಂಬುದು ಭರವಸೆ ಇಲ್ಲದಾಗಿದೆ. ಶ್ರೀ ಹರಿಹರ ಎಂಬ ಒಳ್ಳೆಯ ಶೀಲವಂತ ಮನುಷ್ಯನಿಗೆ ಅನ್ಯಾಯಕ್ಕೆ ಬಾಗಲಕೋಟೆ ನಾಗರಿಕರು ಕಳವಳಗೊಂಡಿದ್ದಾರೆ. ಶ್ರೀ ಹರಿಹರ ಹತ್ತರ ಮೋಟರ ಪರಮಿಟ್ ಇದ್ದರೂ ಸಹ ಇಲ್ಲವೆಂದೂ ಬೊಟ್ಟುಬಟ್ಟೆ ಹಾಕಿರುತ್ತಾರೆ.

ಪುಂಡ ಪೋಕರಿಗಳ ಹಾವಳಿ

ಹಾಸನ ಜಿಲ್ಲೆಯಲ್ಲಿ ಶ್ರೀಮಂತರು ಪೂಟ್ ಲಾಯರುಗಳು ಸೇರಿಕೊಂಡು ಪುಂಡು ಪೋಕರಿ ಜನಗಳಿಗೆ ಮದ್ದತ್ತು ಕೊಟ್ಟು ಬಡವರಿಗೆ ಕಿರುಕುಳಕೊಡುತ್ತಾ ಇರುತ್ತಾರೆ. ಪೋಲೀಸರು ಶ್ರೀಮಂತರಿಗೆ ಬೆಂಬಲವಾಗಿರುತ್ತಾರೆ. ಆದುದರಿಂದ ನೂತನ ಜಿಲ್ಲಾಧಿಕಾರಿಗಳು ಆಯಾ ಪ್ರಾಂತದ ಪೋಲೀಸು ಠಾಣೆಗಳನ್ನು ಪರಿಶೀಲಿಸಿ, ಪಾನನಿರೋಧ ಲಂಚನಿರೋಧ ಈ ವಿಚಾರದಲ್ಲಿ ಸರಿಯಾದ ಏರ್ಪಾಡು ಮಾಡಬೇಕಾಗಿಯೂ ಗುತ್ತಿಗೆದಾರರಿಗೆ ಭೂಮಾಲಿಕರಿಂದ ಉಂಟಾಗುವ ತೊಂದರೆಯನ್ನು ತಪ್ಪಿಸಬೇಕಾಗಿಯೂ, ಕೆಲವು ಪಂಚಾಯಿತ್ತಿಗಳು ವೈಷಮ್ಯದಿಂದ ಕೂಡಿ ಗ್ರಾಮಗಳು ಹಾಳಾಗುತ್ತಿರುವುದನ್ನು ಸರಿಪಡಿಸಬೇಕೆಂದು ಪ್ರಾರ್ಥಿಸುತ್ತೇನೆ.

ಹುಚ್ಚಪ್ಪ, ಹಾಸನ

ಸರಕಾರದವರು ಅಲೋಯೆನ್ಸ್ ಕಡಿತ ಮಾಡಿದ್ದರಿಂದ

ಉತ್ತರ ಕರ್ನಾಟಕದ ಪೋಲೀಸರಲ್ಲಿ ಹಾಹಾಕಾರ

ಕರ್ನಾಟಕ ಪ್ರಾಂತೀಕರಣವಾದಂದಿನಿಂದ ಹೊಸ ಮೈಸೂರು ಸರಕಾರ ಉತ್ತರ ಕರ್ನಾಟಕದ ನೌಕರದಾರರಿಗೂ, ಪೋಲೀಸರಿಗೂ ಎಣಿಸಲಾರದಷ್ಟು ಅನ್ಯಾಯಗಳನ್ನು ಮಾಡಿದ್ದರಿಂದ, ನೌಕರದಾರರಲ್ಲಿ ಅಸಂತುಷ್ಟತೆ ದಿನ ದಿನವೂ ಬೆಳೆಯುತ್ತಿದೆಯಲ್ಲದೆ, "ನಮಗೆ ಮುಂಬಯಿ ಸರಕಾರವೇ ಚೆನ್ನಾಗಿತ್ತು" ಎಂದು ಎಲ್ಲರೂ ಉದ್ಗಾರ ತೆಗೆಯುತ್ತಿರುವರು. ಮುಂಬಯಿಗೆ ಸೇರುವುದರ ಸಲುವಾಗಿ ಚಳವಳ ಮಾಡುತ್ತೇವೆಂದೂ ಎಷ್ಟೋ ಜನರ ಬಾಯಿಯಿಂದ ಉದ್ಗಾರ ಬರುತ್ತಿದೆ.

ಹೋದ ವರ್ಷ ತುಟ್ಟಿಭತ್ತೆಯನ್ನು ಕಡಿಮೆ ಮಾಡಿ ಮೊದಲನೇ ಪೆಟ್ಟನ್ನು ಕೊಡಲಾಯಿತು. ಮುಂಬಯಿ ಪ್ರಾಂತದಲ್ಲಿ ರೂ. 50 ಪಗಾರದವರಿಗೆ ರೂ. 35 ತುಟ್ಟಿಭತ್ತೆ ರೂ. 50 ರಿಂದ ರೂ. 100ರವರೆಗೆ ರೂ. 45 ತುಟ್ಟಿಭತ್ತೆ ಹೀಗೆ ಹೆಚ್ಚಿಗೆ ತುಟ್ಟಿಭತ್ತೆ ಸಿಗುತ್ತಿತ್ತು. ಮೈಸೂರು ಸರಕಾರದವರು ಇದರಲ್ಲಿ ಕಡಿತ ಮಾಡಿ ರೂ. 50ರವರೆಗೆ ರೂ. 25 ತುಟ್ಟಿಭತ್ತೆ, ಮೇಲಿನ ಸ್ಕೇಲಿನವರಿಗೆ ರೂ. 30, ತುಟ್ಟಿಭತ್ತೆ ಮಾಡಿದರು. ಕಡಿತ ಮಾಡಲ್ಪಟ್ಟ ತುಟ್ಟಿಭತ್ತೆಯನ್ನು ಪರ್ಸನಲ್ ಪೇ ಎಂದು ಹಿಡಿಯಬೇಕೆಂದು ಹೇಳಿದ್ದರಿಂದ, ಎಲ್ಲಾ ನೌಕರದಾರರಿಗೆ ಪ್ರತಿ ವರ್ಷ ಸಿಗಬೇಕಾಗಿದ್ದ ಬಡ್ತಿ ಸಿಗದಂತಾಗಿ ಬಹಳ ಅನ್ಯಾಯಕ್ಕೀಡಾದರು.

ಹೊಸ ಸರಕಾರದ ಪಗಾರ ಸ್ಕೇಲು ಕೂಡ ಕಡಿಮೆಯಾಗಿದೆ. ಈಗ ಮತ್ತೆ ಸರಕಾರದವರು ಅತಿ ದೊಡ್ಡ ಪೆಟ್ಟನ್ನು ಕೊಟ್ಟಿದ್ದಾರೆ. ಪೋಲೀಸ ಖಾತೆಯ ಎಲ್ಲಾ ಪೋಲೀಸರ ಮತ್ತು ನೌಕರದಾರರ ಡ್ಯೂಟಿ ಅಲೋಯೆನ್ಸ್, ಮನೆ ಬಾಡಿಗೆ, ಶಿಕ್ಷಣ ಅಲೋಯೆನ್ಸ್ ಮೊದಲಾದವುಗಳನ್ನೆಲ್ಲ ಕಡಿಮೆ ಮಾಡಿದ್ದರಿಂದ, ಪೋಲೀಸ್ ಖಾತೆಯಲ್ಲಿ ಹಾಹಾಕಾರವೆದ್ದಿದೆ. "ನೌಕರಿ ಬಿಟ್ಟು ಯಾವದಾದರೊಂದು ಉದ್ಯೋಗ ಮಾಡುವದು ಛಲೋ" ನೌಕರದಾರರು ಎಂದು ಹೇಳುತ್ತಿರುವರು.

ಒಬ್ಬ ಸಾದಾ ಪೋಲೀಸನಿಗೆ ಪಗಾರ 35, ತುಟ್ಟಿಭತ್ತೆ 35, ಮನೆ ಬಾಡಿಗೆ 4, ಶಿಕ್ಷಣ ಅಲೋಯೆನ್ಸ್ ರೂ. 1 ರಿಂದ 4 ಮತ್ತು ಡ್ಯೂಟಿ ಅಲೋಯೆನ್ಸ್ ಸಿಗುತ್ತಿತ್ತು.

ಈಗಿನ ಸ್ಕೇಲಿನಂತೆ ಪಗಾರ 35, ತುಟ್ಟಿಭತ್ತೆ 25, ಇಷ್ಟೇ ಸಿಗುತ್ತದೆ.

ಹೆಡ್ ಕಾನ್ಸ್ಟೇಬಲನಿಗೆ ಮೊದಲು ಪಗಾರ ರೂ. 50, ತುಟ್ಟಿಭತ್ತೆ ರೂ. 35, ಶಿಕ್ಷಣ ಅಲೋಯೆನ್ಸ್ 1-00, ಡ್ಯೂಟಿ ಅಲೋಯೆನ್ಸ್ ರೂ. 10 ಮನೆ ಬಾಡಿಗೆ ರೂ. 4 ಸಿಗುತ್ತಿತ್ತು. ಈಗ ಅಲೋಯೆನ್ಸ್ ಎಲ್ಲಾ ಕಡಿಮೆ ಮಾಡಿದ್ದರಿಂದ ಪ್ರತಿ ತಿಂಗಳೂ ರೂ. 25 ಕಡಿತವಾಗಿದೆ.

ಬಾರ್ನಿಶಿ ಮತ್ತು ಕ್ಲಾರ್ಕ ಕೆಲಸ ಮಾಡುವವರಿಗೆ ರೂ. 5 ಮತ್ತು ರೂ. 10 ಪ್ರತಿ ತಿಂಗಳು ಸಿಗುತ್ತಿತ್ತು. ಇದನ್ನು ಕಡಿಮೆ ಮಾಡಲಾಯಿತು. ಎಮ್.ಟಿ ಸೆಕ್ಷನ್ (ಡ್ರೈವರ ಮೊದಲಾದವರು) ನವರಿಗೆ ತಿಂಗಳಾ ರೂ. 15 ರಿಂದ 50, ವೈರ್‌ಲೆಸ್ ಸೆಕ್ಷನ್ ತಿಂಗಳಾ ರೂ. 25 ರಿಂದ 30, ಲಂಚ ನಿರ್ಮೂಲನ ಖಾತೆಯವರಿಗೆ ತಿಂಗಳಾ ರೂ. 60 ರಿಂದ 80 ಅಲೋಯೆನ್ಸ್ ಸಿಗುತ್ತಿದ್ದದ್ದನ್ನು ಕಡಿಮೆ ಮಾಡಲಾಯಿತು. ಹೀಗೆ ಸರ್ವ ಸಾಧಾರಣ ಪ್ರತಿಯೊಬ್ಬನಿಗೆ ತಿಂಗಳಿಗೆ ರೂ. 25 ರಿಂದ 60ರ ತನಕ ಕಡಿತ ಮಾಡಿದ್ದು, ನೌಕರದಾರರಿಗೆ ವಿಪರೀತ ಅನ್ಯಾಯವಾಗಿದೆ. ಕೇರಳದ ಕಮ್ಯೂನಿಸ್ಟ ಸರಕಾರ ನೌಕರದಾರರ ಪಗಾರ ಹೆಚ್ಚಿಗೆ ಮಾಡಿ, ಅವರ ಕರ್ತವ್ಯ ಶಕ್ತಿಯನ್ನು ಜಾಸ್ತಿಗೊಳಿಸುತ್ತಿರುವಾಗ ಕಾಂಗ್ರೆಸ್ ಸರಕಾರ ನೌಕರದಾರರ ಪಗಾರ, ಅಲೋಯೆನ್ಸ್‌ಗಳಲ್ಲಿ ಕಡಿಮೆ ಮಾಡಿ ಅಪಾರ ಅನ್ಯಾಯ ಮಾಡುತ್ತಿದೆ. ಈ ಅನ್ಯಾಯವನ್ನು ಎಲ್ಲರೂ ಪ್ರತಿಭಟಿಸಬೇಕು.

ಎನ್. ಕೆ. ಉಪಾಧ್ಯಾಯ
ಬಿಜಾಪುರ

ಬಿಜಾಪುರ ಸರಕಾರಿ ಆಸ್ಪತ್ರೆಯಲ್ಲಿ

ಬಾಣಂತಿಯನ್ನು ಬಲವಂತದಿಂದ ಹೊರತಳ್ಳಿದರು

ಸಂಪಾದಕರಿಗೆ ಪತ್ರಗಳು

ತಾ. 5—8—1958ನೇ ದಿನ ನನ್ನ ಪತ್ನಿ ರುಕ್ಮಿಣಿ ವಿಠಲ ಸಾಖರೆಯವರನ್ನು ಬಾಣಂತಿತನದ ಸಲುವಾಗಿ ಬಿಜಾಪುರದ ಸರ್ಕಾರಿ ದವಾಖಾನೆಗೆ ಕಳುಹಿಸಿದೆ. ಅದೆ ದಿವಸ ಆಕೆಗೆ ಹೆರಿಗೆಯಾಯಿತು. ಮಗು ಹುಟ್ಟಿದಾಗಲೇ ಅದರ ಬೆನ್ನ ಮೇಲೆ ಗಂಟಾಗಿ ಅದು ಒಡೆದಿತ್ತು. ತಾರೀಕು ೧೩—೮—೫೮ರಂದು ನನ್ನ ಪತ್ನಿಯನ್ನು ದವಾಖಾನೆಯಿಂದ ಹೊರಗೆ ಹಾಕಲಾಯಿತು. ಮಗುವಿಗೆ ನೆಟ್ಟಗಿಲ್ಲ, ಕಾರಣ ಇನ್ನೂ ಕೆಲವು ದಿನ ದವಾಖಾನೆಯಲ್ಲಿರುತ್ತೇನೆಂದರೂ ಒತ್ತಾಯ ಮಾಡಿ ಜಗಳಾಡಿ ಹೊರಗೆ ಹಾಕಿದರು. ೧೩-೮-೫೮ರಂದು ನನ್ನ ತಾಯಿ ಸಣ್ಣ ಕೂಸನ್ನು ಸಿವಿಲ್ ಸರ್ಜನರಿಗೆ ತೋರಿಸಿದಾಗ ನೀವು ಇಷ್ಟು ಅವಸರ ಮಾಡಿ ದವಾಖಾನೆಯಿಂದ ಯಾಕೆ ಹೋದಿರಿ ಎಂದು ಕೇಳಿದಾಗ ಲೇಡಿ ಡಾಕ್ಟರರೂ ಬೆಳ್ಳುಳ್ಳಿ ಎಂಬವರೂ ಜಬರದಸ್ತಿಯಿಂದ ಹೊರಗೆ ಹಾಕಿದರು, ಎಷ್ಟು ವಿನಂತಿ ಮಾಡಿಕೊಂಡರೂ ಕೇಳಲಿಲ್ಲವೆಂದು ಹೇಳಿದರು. ಅಲ್ಲೇ ನಿಂತಿದ್ದ ಲೇಡಿ ಡಾಕ್ಟರರಿಗೆ ಸಿವಿಲ್ ಸರ್ಜನರು ಕೇಳಲಾಗಿ ಸ್ವಯಂಸ್ಫೂರ್ತಿಯಿಂದ ಹೋದರೆಂದು ಸುಳ್ಳು ಹೇಳಲಾಗಿ ಅವರು ಹೋಗುತ್ತೇನೆಂದರೂ ನೀವು ಯಾಕೆ ಹೋಗಗೊಟ್ಟಿರೆಂದು ಬೈದರು.

ಇಂಥ ಘಟನೆಗಳು ಸರಕಾರಿ ದವಾಖಾನೆಯಲ್ಲಿ ಮೇಲಿಂದ ಮೇಲೆ ನಡೆಯುತ್ತಿದ್ದು ಬಡಜನರಿಗೆ ಬಹಳ ಅನ್ಯಾಯವಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೆ ವಿಚಾರಣೆ ನಡೆಸಿ ದವಾಖಾನೆಯನ್ನು ಸುಧಾರಿಸಬೇಕಾಗಿ ವಿನಂತಿ.

ವಿಠಲ ರಾಮಚಂದ್ರಪ್ಪ ಸಾಖರೆ
ಬಿಜಾಪುರ

ರೊಪ್ಪದ ಗೋವುಗಳ ಗೋಳು !

ಪಾವಗಡ ತಾಲ್ಲೋಕು ರೊಪ್ಪದಲ್ಲಿ ಗೋಮಾಳವಿಲ್ಲದೆ ರೈತರಿಗೆ ಕಷ್ಟವಾಗಿದೆ. ಪುರಾತನ ಕಾಲದಿಂದಿದ್ದ ಗೋಮಾಳವನ್ನು ಫಾರೆಸ್ಟ್ ರೇಂಜಿನ ಆಫೀಸಿನವರು ಅಕ್ವೈರ್ ಮಾಡಿಕೊಂಡು ಅದನ್ನು ಫಾರೆಸ್ಟ್ ಮಾಡುತ್ತಿರುವುದನ್ನು ನೋಡಿದರೆ ಈಗ ಐದು ವರುಷಗಳಿಂದ ಮಳೆಯಾಗದೆ ಗೋಗಳಿಗೆ ಕಷ್ಟವಾಗಿದ್ದು ಇದೀಗ ಇನ್ನೂ ತೊಂದರೆಯಾಗಿದೆ. ಗೋವುಗಳಿಗೆ ಬೇರೆ ಗೋಮಾಳವನ್ನಾದರೂ ಮಾಡಿಕೊಡಬೇಕು. ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯದಲ್ಲಿ ತನಿಖೆ ಮಾಡಿ ರೈತರ ಕಷ್ಟ ಪರಿಹರಿಸುತ್ತಾರೆಂದು ತಿಳಿದಿದ್ದೇವೆ.

ವೆಂಕಟ್ರಾಮಯ್ಯ, ಪಾವಗಡ

ದಾನದಿಂದ ಧನಸಂಪಾದನೆ !

ತೀರ್ಥಹಳ್ಳಿ ತಾಲ್ಲೂಕು ರೋಮನ್ ಕ್ಯಾಥೊಲಿಕ್ ಚರ್ಚ ನರ್ಸರಿ ಸ್ಕೂಲಿನ ಮುಖ್ಯಾಧಿಕಾರಿಗಳು, ಅಮೇರಿಕಾದಿಂದ ಬಡಮಕ್ಕಳಿಗೆ ಧರ್ಮಾರ್ಥವಾಗಿ ಕೊಡುವ ಹಾಲು ಪುಡಿಯನ್ನು ಇಲ್ಲಿಯ ಅಧಿಕಾರಿಗಳು ಏಜೆಂಟರನ್ನಿಟ್ಟು ಶ್ರೀಮಂತರಿಗೆ ಮಾರಾಟ ಮಾಡಿಸುತ್ತಿದ್ದಾರೆ. ಇದನ್ನು ಇನ್ನುಮುಂದೆ ಬಡಮಕ್ಕಳಿಗೆ ಸಿಗುವಂತೆ ಮಾಡಬೇಕೆಂದು ಪ್ರಾರ್ಥಿಸುತ್ತೇವೆ.

ಜೋಸೆಫ್ ರಸ್ತಲೀನ್, ತೀರ್ಥಹಳ್ಳಿ

ಕಾರ್ಮಿಕರಿಂದ ಸ್ವಾತಂತ್ರ್ಯ ದಿನಾಚರಣೆ

ಸಕಲೇಶಪುರ: ಕರ್ನಾಟಕ ಪ್ರಾವಿನ್ಷಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ನಿನ ಆಶ್ರಯದಲ್ಲಿ ಇಲ್ಲಿ ಆಗಸ್ಟ 15ರಂದು ಸ್ವಾತಂತ್ರ್ಯ ದಿನೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು. ಹಾಸನ ಜಿಲ್ಲೆಯ ವಿವಿಧ ಭಾಗಗದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಪ್ರಚಂಡ ಮೆರವಣಿಗೆ ಮುಖ್ಯ ಬೀದಿಗಳಲ್ಲಿ ಹೊರಟು ದೊಡ್ಡ ಮೈದಾನದಲ್ಲಿ ಭಾರೀ ಸಭೆಯನ್ನು ನಡೆಸಿತು. ಹಾಸನದ ಪ್ರಸಿದ್ಧ ವಕೀಲರಾದ ಕಾಂ. ಹೆಚ್.ಎಸ್. ಮುರುಗಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಕಾಂ. ಎಂ. ವಿ. ಸುಬ್ಬಯ್ಯನವರು ಸ್ವಾಗತ ಭಾಷಣ ಮಾಡಿದರು

ಸಭೆಯಲ್ಲಿ ಅನೇಕರು ಭಾಷಣ ಮಾಡಿ ಕಾಂಗ್ರೆಸ್ ಸರ್ಕಾರಗಳ ಕಾರ್ಮಿಕ ನೀತಿಯನ್ನು ಕಟುವಾಗಿ ಖಂಡಿಸಿದರಲ್ಲದೆ ಕಾರ್ಮಿಕ ಐಕ್ಯತೆಗೆ ಕರೆ ಕೊಟ್ಟರು.

ಬೆಂಗಳೂರಲ್ಲಿ

ಅಲ್ಜೀರಿಯಾ ನಾಯಕ ಷರೀಫ್ ಗ್ವೆಲ್ಲಾಲ್

ಭಾರದಲ್ಲಿರುವ ಅಲ್ಜೀರಿಯಾ ವಿಮೋಚನಾ ಪ್ರತಿನಿಧಿ ಶ್ರೀ ಷರೀಫ್ ಗ್ವೆಲ್ಲಾಲ್ ಅವರು ಇದೀಗ ದಕ್ಷಿಣ ಭಾರತದಲ್ಲಿ ಸಂಚರಿಸುತ್ತಿದ್ದು ಮದ್ರಾಸಿನಿಂದ ಆಗಸ್ಟ 29 ರಂದು ಬೆಂಗಳೂರಿಗೆ ಬರಲಿರುವರು.

ಏಷ್ಯನ್ ಐಕ್ಯತಾ ಸಮಿತಿಯ ಬೆಂಗಳೂರಿನ ಶಾಖೆಯು ಇವರ ಕಾರ್ಯಕ್ರಮಗಳನ್ನು ಗೊತ್ತು ಮಾಡಿದ್ದು ಷರೀಫ್ ಗ್ವೆಲ್ಲಾಲ್ ಅವರು 29—8—58ರ ಸಂಜೆ 6 ಗಂಟೆಗೆ ಕನ್ನಡ ಸಾಹಿತ್ಯ ಪರಿಷನ್ಮಂದಿರಲ್ಲಿ "ಅಲ್ಜೀರಿಯಾ ಮತ್ತು ಮಧ್ಯ ಪೂರ್ವ" ಎಂಬ ವಿಷಯದ ಮೇಲೆ ಮಾತನಾಡುವರು.

ಹೊಟೇಲ್ ಕೆಲಸಗಾರರ ಮುಷ್ಕರದ ನಿರ್ಧಾರ

ಕುಣಿಗಲ್: ತಾ. 17—8—58 ರಂದು ಕುಣಿಗಲ್ ಟೌನ್ ಹೊಟೇಲ್ ಕೆಲಸಗಾರರ ಸಂಘದ ಅಧ್ಯಕ್ಷರಾದ ಶ್ರೀ ಕೆ. ವಿ. ಕೃಷ್ಣಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸರ್ವಸದಸ್ಯರ ಸಭೆ ನಡೆಯಿತು.

ತಾ. 14—4—58ರಲ್ಲೇ ಕುಣಿಗಲ್ ಹೋಟೆಲ್ ಕೆಲಸಗಾರರು ತಮ್ಮ ಬೇಡಿಕೆಳಗನೋಟೀಸನ್ನು ಮಾಲಿಕರಿಗೂ ಲೇಬರ್ ಅಧಿಕಾರಿಗಳಿಗೂ ಕೊಟ್ಟಿದ್ದರೂ ಈವರೆಗೂ ಅವರಾರೂ ಗಮನ ಕೊಡದಿರುವುದನ್ನು ಖಂಡಿಸಿ ತಾ|| 31—8—58 ರಿಂದ ಅನಿರ್ದಿಷ್ಟಕಾಲದವರೆಗೆ ಮುಷ್ಕರ ನಡೆಸಬೇಕೆಂದು ಸರ್ವಾನುಮತದಿಂದ ನಿರ್ಣಯಿಸಿ ಸಾರ್ವಜನಿಕರ ಬೆಂಬಲ ಕೋರಲಾಯಿತು.

'ಜೈ ಹಿಂದ್ ಸಾ ಮಿಲ್ಲು' ಹದಗೆಟ್ಟು ಹೋಗುತ್ತಿದೆ

(೭ನೇ ಪುಟದಿಂದ)

ಗಾರ್ಡ ಎಂದು ಈ ಶಾಖೆಯನ್ನು ಪ್ರವೇಶಿಸಿದ ಇವರಲ್ಲಿ ಇಂಥ ಯೋಗ್ಯತೆಯನ್ನಾರಿಸುವುದೇ ನಮ್ಮ ತಪ್ಪು. ಆ ಶಾಖೆಯವರು ಇವರ ನಡವಳಿಕೆಗಳಿಗೆ ಬೇಸತ್ತು ಇಂಜಿನೀಯರಿಂಗ್ ವಿಭಾಗಕ್ಕೆ ವರ್ಗಾಯಿಸಿದ್ದರು. ಇವರ ಸರ್ವೀಸ್ ಬುಕ್ ಕೆಂಪು ಶಾಯಿಯಿಂದ ತುಂಬಿದೆ. ಅಲ್ಪರಿಗೆ ಅಧಿಕಾರ ಬಂದರೆ ಏನಾಗುತ್ತದೆ ಎಂಬ ಕೆಟ್ಟಗಾದೆ ಮಾತಿಗೆ ಇವರೊಂದು ನಿದರ್ಶನ.

ಈ ಇಬ್ಬರ ದರ್ಬಾರದಿಂದ ಕಾರ್ಮಿಕರಲ್ಲಿ ಭೇದನೀತಿಯನ್ನು ಎಣಿಸುವದರಿಂದ ಯಾವದರಲ್ಲೂ ಈಗ ಹತೋಟಿಯಿಲ್ಲದೆ ಕಾರ್ಮಿಕರು ಬೇಸತ್ತು ಅವರು ಕೆಲಸ ಮಾಡುವುದೇ ಕಷ್ಟವಾಗಿದೆ. ಸರ್ಕಾರ ಕಣ್ಣು ತೆರೆದು ಇಲ್ಲಿಯ ಆಡಳಿತ ವ್ಯವಸ್ಥೆಯನ್ನೆಲ್ಲ ಪರಿಶೀಲಿಸಿ ನುರಿತ ಹಾಗೂ, ಅನುಭವಿಗಳಿಗೆ ತಕ್ಕ ಸ್ಥಳಗಳನ್ನಿತ್ತು, ಕಾರ್ಮಿಕರ ಕೆಲಸಗಳನ್ನು ಒಂದು ವ್ಯವಸ್ಥೆಗೊಳಪಡಿಸಿ, ಈ ಮಿಲ್ಲನ್ನು ಯೋಗ್ಯ ದಾರಿಗೆ ಹಚ್ಚದಿದ್ದರೆ ಸಾ(ಯುವ) ಮಿಲ್ಲನ್ನು ದೇವರೆ ಕಾಪಾಡಬೇಕು.

ಆಹಾರ ಧಾನ್ಯಗಳ ಬೆಲೆಯನ್ನು ಸರಕಾರ ಬೇಗನೆ ಹತೋಟಿಗೊಳಿಸಲಿ !

ಕಮ್ಯೂನಿಸ್ಟ್ ಪಾರ್ಟಿ ಸಭೆಯ ಒತ್ತಾಯ !

ಭಾರತ ಕಮ್ಯೂನಿಸ್ಟ್ ಪಾರ್ಟಿಯ ಬೆಂಗಳೂರು ನಗರ ಶಾಖೆಯ ಸಭೆಯು ಜಿಲ್ಲಾ ಸಮಿತಿ ಕಛೇರಿಯಲ್ಲಿ ತಾರೀಕು 26—8—58ರಂದು ಸೇರಿತ್ತು.

ಸಭೆಯಲ್ಲಿ, ಪಾರ್ಟಿ ಹಿತೈಷಿಗಳಾಗಿ ದುಡಿಯುತ್ತಿದ್ದು, ಪಾರ್ಟಿಯ ಉಮೇದುವಾರ ಸದಸ್ಯತನಕ್ಕಾಗಿ ಅರ್ಜಿ ಸಲ್ಲಿಸಿದ್ದ ಹಲವಾರು ಮಂದಿಯ ಅರ್ಜಿಗಳನ್ನು ಶಾಖೆಯು ಪರಿಶೀಲಿಸಿ, ಅವರನ್ನು ಉಮೇದುವಾರ ಸದಸ್ಯರನ್ನಾಗಿ ಅಂಗೀಕರಿಸುವ ನಿರ್ಣಯವನ್ನು ಮಾಡಿತು.

ವಿಶ್ವ ಶಾಂತಿ ಸಮಿತಿಯ ಅಧ್ಯಕ್ಷರಾದ ಜೋಲಿಯೋ ಕ್ಯೂರಿಯವರ ನಿಧನದ ಬಗ್ಗೆ ಸಭೆಯು ತನ್ನ ಸಂತಾಪವನ್ನು ಸೂಚಿಸಿತು.

ಇಂದು ನಗರದಲ್ಲಿ ಅಕ್ಕಿ ಹಾಗೂ ಇತರ ಜೀವನಾವಶ್ಯಕ ವಸ್ತುಗಳ ಬೆಲೆ ದಿನ ದಿನಕ್ಕೆ ಏರುತ್ತಿರುವುದರಿಂದಾಗಿ, ಬಡ ಕೂಲಿಗಾರರ, ಮಧ್ಯಮ ವರ್ಗದ ಹಾಗೂ ಇತರ ಜನವಿಭಾಗದ ಜೀವನವು ಹೆಚ್ಚೆಚ್ಚು ದುರ್ಭರವಾಗುತ್ತಿದೆ. ಆದರೂ ಸರಕಾರ ಯಾವ ಕ್ರಮವನ್ನೂ ತೆಗೆದುಕೊಳ್ಳದಿರುವುದು ಶೋಚನೀಯವಾಗಿದೆಯೆಂದು ಸಭೆಯು ಅಭಿಪ್ರಾಯಪಡುತ್ತದೆ. ಆದಷ್ಟು ಬೇಗನೇ ಜೀವನಾವಶ್ಯಕ ವಸ್ತುಗಳ ಬೆಲೆಗಳನ್ನು ಹತೋಟಿಗೊಳಿಸಬೇಕೆಂದೂ ಮತ್ತು ಅಲ್ಲಲ್ಲಿ ಕಡಿಮೆ ಬೆಲೆಯ ಅಕ್ಕಿ ಅಂಗಡಿಗಳನ್ನು ಸರಕಾರದವರು ತೆರೆಯಬೇಕೆಂದೂ, (ತೆರೆದಿದ್ದರೆ ಅದನ್ನು ಇನ್ನಷ್ಟು ಇಮ್ಮಡಿಗೊಳಿಸಬೇಕೆಂದೂ) ಸಭೆಯು ಸರಕಾರವನ್ನು ಒತ್ತಾಯಪಡಿಸುತ್ತದೆ.

ಆಗಸ್ಟ್ 29ರಂದು ಅಲ್ಜೀರಿಯಾದ ಪ್ರತಿನಿಧಿಗಳು ನಗರಕ್ಕಾಗಮಿಸಲಿರುವುದರಿಂದ, ಸಭೆಯು ಅವರಿಗೆ ಸ್ವಾಗತವನ್ನು ನೀಡುತ್ತದೆ ಮತ್ತು ನಗರದ ಜನತೆಯು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಅಲ್ಜೀರಿಯ ಜನತೆಯ ಪರಿಹಾರ ನಿಧಿಗೆ ಸಹಾಯ ಧನವನ್ನು (ಬಟ್ಟೆಬರೆ, ಯಾವ ತರದ ವಸ್ತುಗಳನ್ನೂ ದಾನಮಾಡಬಹುದು) ನೀಡಬೇಕೆಂದು ವಿನಂತಿ ಮಾಡಿಕೊಳ್ಳುತ್ತದೆ

ಮುಂದಿನ ತಿಂಗಳ ಕಾರ್ಯಕ್ರಮನ್ನು ಪರಿಶೀಲಿಸಿ, ಅಂಗೀಕರಿಸಿದ ಮೇಲೆ ಸಭೆಯು ಮುಕ್ತಾಯವಾಯಿತು.

ವಾತರೋಗಕ್ಕೆ ಚಿಕಿತ್ಸೆ

ವಾತರೋಗಧ ಕಾರಣವನ್ನು ಕಂಡುಹಿಡಿಯುವ ಪ್ರಯತ್ನಗಳೆಲ್ಲ ಇದುವರೆಗೆ ಯಶಸ್ವಿಯಾಗಿರಲಿಲ್ಲ. ಸೋವಿಯತ್ ಯೂನಿಯನ್ನಿನ ನೊವೊಸಿಬಿರ್‌ಸ್ಕ್ ಔಷಧ ಶಾಲೆಯ ಪ್ರೊಫೆಸರ್ ಜಾಲೆಸ್ಕಿ ಮತ್ತು ಪ್ರೊಫೆಸರ್ ಮೊರೊಬಿಯೆವ್ ಇತ್ತೀಚೆಗೆ ವಾತರೋಗದ ಅಣುವನ್ನು ಕಂಡುಹಿಡಿದಿದ್ದಾರೆ. ಈ ಶೋಧನೆಯನ್ನು ಈಗ ಮೋಸ್ಕೋ ವಯರಸೋಲಜಿ ಸಂಸ್ಥೆಯೊಳಗೆ ಅಕಡಮೀಶಿಯನ್ ಚುಮಕೋವ್ ಇವರ ನೇತೃತ್ವದಲ್ಲಿ ಮುಂದುವರಿಸಲಾಗುತ್ತಿದೆ. ಎಲ್ಲೆಲ್ಲೂ ವ್ಯಾಪಕವಾಗಿರುವ ವಾತರೋಗದ ನಿವಾರಣೆಗೆ ಬೇಗನೆ ಪರಿಣಾಮಕಾರಿ ಚಿಕಿತ್ಸೆಯ ಕ್ರಮವೊಂದನ್ನು ಕಂಡುಹಿಡಿಯಲಾಗುವುದೆಂದು ಹಾರೈಸಬಹುದು.

ಭಾರತದ ಬಾಗಿಲಲ್ಲಿ.......

(ಮೊದಲನೇ ಪುಟದಿಂದ)

ಪ್ರಾಚ್ಯದಲ್ಲಿಯ ಘಟನೆಗಳ ಪರಿಣಾಮವೇನಾದರೂ ಕಂಡರೆ ಸ್ನೇಹಿತ ರಾಷ್ಟ್ರಗಳಿಗೆ ನೆರವು ನೀಡಲು ಅಮೇರಿಕೆಯ ನೌಕಾಪಡೆ ಸಿಂಗಪೂರಿಗೆ ತೆರಳಿದೆ" ಎಂದು ಹೇಳಿತು. ಇದರಿಂದ ಉದ್ದೇಶ ಸ್ಪಷ್ಟ.

ಇತ್ತೀಚೆಗಿನ ಅನುಭವಗಳು ಅಮೇರಿಕೆಯ ಈ ನೌಕಾಪಡೆಗಳ ಉದ್ದೇಶವನ್ನು ತಿಳುಹಿಸುವೆ. ಫಿಲಿಪೈನ್, ಕ್ಯೂಬಾ, ಇವುಗಳಲ್ಲಾದುದೂ ಇದೆ, ಈಗ ಲೆಬನಾನ್‌ನಲ್ಲಿ ನಡೆದಿರುವುದೂ ಇದೆ, ಅಂತೆಯೇ ಈಗ ಸಿಂಗಪೂರಿನಲ್ಲಿ ಇವರು ನೆಲೆಯೂರುತ್ತಿರುವುದು ಆಗ್ನೇಯ ಏಷ್ಯಾದ ಶಾಂತಿ ನೆಮ್ಮದಿಗಳಿಗೆ ಗಂಡಾಂತರಕಾರಿಯಾಗಿದೆ.

ನಮಗೇಕೆ ಭೀತಿ ?

ಹಿಂದೂ ಮಹಾಸಾಗರದಲ್ಲಿ ಈಗಾಗಲೇ ಅಮೇರಿಕೆಯ ೮ ಸಮರ ನೌಕೆಗಳು ಚಲನವಲನದಲ್ಲಿದ್ದು ಇನ್ನೂ ಸೇನೆಗಳು ಬರುತ್ತಿವೆಯೆಂದು ವರದಿಯಾಗಿದೆ. 'ಹಿಂದೂ ಮಹಾಸಾಗರ ಫ್ಲೀಟ್' ನಿರ್ಮಾಣಕ್ಕೆ ಸನ್ನಾಹಗಳು ನಡೆದಿವೆಯೆಂದೂ ಹೇಳಲಾಗಿದೆ. ಲೆಬನಾನ್‌ನಲ್ಲಿಯಂತಹ ಪರಿಸ್ಥಿತಿ ಬಂದರೆ ಇದನ್ನು ಉಪಯೋಗಿಸಲಾಗುವದಂತೆ. ಇದರಿಂದ ಅವರ ಗುರಿಯಲ್ಲಿ ಭಾರತವೂ ಇರುವುದು ಸ್ಪಷ್ಟವಾಗಿದೆ.

ಪಾಕಿಸ್ತಾನವೂ ಭಾರತದ ಗಡಿಗಳಲ್ಲಿ ನಡೆಸಿರುವ ಧಾಳಿ ಕಿರುಕುಳುಗಳು ಪೂರ್ವ ಯೋಚಿತವೂ ಸುಯೋಜಿತವೂ ಆಗಿವೆ. ಕರಾಚಿಯು ಈ ಘಟನೆಗಳ ಬಗ್ಗೆ ಚಕಾರವೆತ್ತದೆ ಮೌನಿಯಾಗಿದೆಯಷ್ಟೇ ಅಲ್ಲ, ಪ್ರೋತ್ಸಾಹಿಸುತ್ತಿರುವಂತಿದೆ. ಇದರದೆಲ್ಲ ಅರ್ಥವೇನು ? ಪಾಕಿಸ್ತಾನಕ್ಕೆ ಇರುವ ಆ ದುರಾಕ್ರಮಣದ ಪ್ರೇರಣೆ ಎಲ್ಲಿಂದ ಬರುತ್ತಿದೆ? ಪಾಕಿಸ್ತಾನದಲ್ಲಿ ಅಮೇರಿಕೆ ಶಸ್ತ್ರಾಸ್ತ್ರಗಳ ಕುಪ್ಪೆಯನ್ನೇ ಸುರಿಯುತ್ತಿದೆ. ವಿಧ್ವಂಸಕಗಳನ್ನೂ ಕಾವಲು ಹಡಗುಗಳನ್ನೂ ಸರಬರಾಜು ಮಾಡುತ್ತಿದೆ. ಪಕ್ಕದಲ್ಲೇ ಅಮೇರಿಕೆ ಇಂಥ ಕಾರ್ಯದಲ್ಲಿ ತೊಡಗಿರುವುದೂ ಸಿಂಗಪೂರಿನಲ್ಲಿ ಸೈನ್ಯದ ಬಿಡಾರಗಳನ್ನು ಬಿಡುತ್ತಿರುವುದನ್ನೂ ಗಮನಿಸಬೇಕಾಗಿದೆ ಇದು ಭಾರತವೊಂದಕ್ಕೆ ಅಲ್ಲ, ಏಷ್ಯಾ—ಆಫ್ರಿಕಾ ರಾಷ್ಟ್ರಗಳಿಗೇ ಗಂಡಾಂತರಕಾರಿಯಾಗಿದೆ. ಮುಸುಡನ್ನು ಮೇಲೆತ್ತುತ್ತಿರುವ ಈ ದುರಾಕ್ರಮಣದ ನೀತಿಯನ್ನು ಮೊಳಕೆಯಲ್ಲೇ ಜಜ್ಜಬೇಕಾಗಿದೆ.

ಅಮೇರಿಕೆಯನ್ನು ಈ ಚಿತ್ರದಿಂದ ಅಳಿಸಿಹಾಕದಿದ್ದರೆ ಭಾರತ—ಪಾಕಿಸ್ತಾನಗಳ ಸ್ನೇಹ ಸಂಬಂಧ ಎಂದೂ ಕುದುರದು.

ಪಾರ್ಟಿ ಸದಸ್ಯರಿಗೆ ಕರೆ

[ಮೊದಲನೆ ಪುಟದಿಂದ]

2. ಕಾರ್ಮಿಕ, ರೈತ, ಮಧ್ಯಮ ವರ್ಗ ಮತ್ತಿತರ ದುಡಿಯುವ ಜನತೆಯನ್ನು ಪ್ರತಿನಿಧಿಸುವ ಕಾಂಗ್ರೆಸ್ಸೇತರ ಪಕ್ಷಕ್ಕೆ ಅಧಿಕಾರ ನಡೆಸಲು ಘಟನೆಯಲ್ಲಿ ಅವಕಾಶ. ಈ ಪ್ರಶ್ನೆಗಳ ಬಗ್ಗೆ ನಮ್ಮ ದೇಶದ ಪ್ರಜಾಪ್ರಭುತ್ವವಾದಿಗಳು ನಿರ್ದಿಷ್ಟ ಅಭಿಪ್ರಾಯ ವ್ಯಕ್ತಪಡಿಸುವುದು ಅಗತ್ಯದ್ದಾಗಿದೆ.

ಕೇಂದ್ರ ಕಾರ್ಯಕಾರಿ ಸಮಿತಿಯು ಕೇರಳದ ಪರಿಸ್ಥಿತಿಯನ್ನು ವಿಮರ್ಶಿಸಿ ಮಾಡಿದ ತೀರ್ಮಾನದಲ್ಲಿ ಕೇರಳದ ಘಟನೆಗಳ ಬಗ್ಗೆ ಸಮರ್ಪಕವಾದ ಉತ್ತರವನ್ನು ನೀಡಿದೆ. ಕೇರಳದ ಒಳಗೂ ಹೊರಗೂ ಇಡೀ ಜನತೆ ಕೇರಳ ಸರಕಾರಕ್ಕೆ ಬೆಂಬಲ ನೀಡಿ ಪ್ರತಿಗಾಮಿಗಳ ಪಿತೂರಿಯನ್ನು ವಿಫಲಗೊಳಿಸಲು ದುಡಿಯಬೇಕೆಂದು ಕಾರ್ಯಕಾರಿ ಸಮಿತಿಯು ತನ್ನ ನಿರ್ಣಯದಲ್ಲಿ ಕರೆ ಕೊಟ್ಟಿದೆ.

ನಮ್ಮ ಪ್ರಾಂತದ ಪಾರ್ಟಿ ಸದಸ್ಯರ ಮೇಲೆ ದೊಡ್ಡ ಜವಾಬ್ದಾರಿ ಇದೆ. ಪಾರ್ಟಿಯ ಕರೆಯನ್ನು ಪ್ರಾಂತಾದ್ಯಂತ ಎಲ್ಲ ಜನವಿಭಾಗಗಳ ನಡುವೆ ಪ್ರಚಾರ ಮಾಡಬೇಕಾಗಿದೆ. ಈ ಉದ್ದಿಶ್ಯದಿಂದ ಕಾರ್ಯಕಾರಿ ಸಮಿತಿಯು ತೀರ್ಮಾನವನ್ನು ಕನ್ನಡದಲ್ಲಿ ಪ್ರಕಟಿಸಿದ್ದೇವೆ. ಎಲ್ಲ ಪಾರ್ಟಿ ಘಟಕಗಳೂ, ಸದಸ್ಯರೂ, ಹಿತೈಷಿಗಳೂ ಇದನ್ನು ತರಿಸಿಕೊಂಡು ಸಾಮೂಹಿಕ ಮಾರಾಟ ಮಾಡಬೇಕೆಂದು ವಿನಂತಿಸುತ್ತೇವೆ.

ಇದರ ಜೊತೆಗೆ ಪಾರ್ಟಿಯ ಧೋರಣೆಯನ್ನು ವಿವರಿಸಿ ಕೇರಳದ ಕಮ್ಯೂನಿಸ್ಟ್ ಸರಕಾರಕ್ಕೆ ಬೆಂಬಲ ಪಡೆಯಲು ಎಲ್ಲ ಕಡೆಗಳಲ್ಲೂ ತೀವ್ರವಾದ ಪ್ರಚಾರ ಮತ್ತು ಸಭೆಗಳನ್ನು ನಡೆಸಬೇಕೆಂದು ಕೋರುತ್ತೇವೆ.

ಭಾರತ ಕಮ್ಯೂನಿಸ್ಟ್ ಪಾರ್ಟಿಯ ಅಮೃತಸರ ಅಧಿವೇಶನದ ಚಾರಿತ್ರಿಕ ನಿರ್ಣಯಗಳಾದ ಹೊಸ ಪಾರ್ಟಿ ಘಟನೆ ಮತ್ತು ರಾಜಕೀಯ ಗೊತ್ತುವಳಿಗಳನ್ನು, ಕನ್ನಡದಲ್ಲಿ ಪ್ರಕಟಿಸಲಾಗಿದೆ. ಕಮ್ಯೂನಿಸ್ಟರು ಹಿಂಸಾವಾದಿಗಳೆಂದೂ, ಪ್ರಜಾಪ್ರಭುತ್ವ ವಿರೋಧಿಗಳೆಂದೂ ಅಪಪ್ರಚಾರ ನಡೆಯುತ್ತಿರುವಾಗ ನಮ್ಮ ಪಾರ್ಟಿಯ ಅಧಿಕೃತ ನಿಲುವನ್ನು ಜನತೆಯ ಮುಂದೆ ಪ್ರಚುರ ಪಡಿಸುವುದು ಆದ್ಯ ಕರ್ತವ್ಯವಾಗಿರುತ್ತದೆ. ಪಾರ್ಟಿಯ ಘಟನೆ ಮತ್ತು ರಾಜಕೀಯ ಗೊತ್ತುವಳಿಗಳನ್ನು ಎಲ್ಲ ಪಾರ್ಟಿ ಸದಸ್ಯರೂ ಓದಿ ಅಭ್ಯಾಸ ಮಾಡಲೇಬೇಕು. ಮತ್ತು ಅವನ್ನು ಅಧಿಕ ಸಂಖ್ಯೆಗಳಲ್ಲಿ ಜನತೆಯಲ್ಲಿ ಮಾರಾಟ ಮಾಡುವುದು ಬಹಳ ಅಗತ್ಯ. ನಮ್ಮ ಪಾರ್ಟಿಗೂ ಇತರ ಜನ ವಿಭಾಗಕ್ಕೂ ನಡುವೆ ಅಪಪ್ರಚಾರದ ಮೂಲಕ ನಮ್ಮ ಶತೃಗಳು ಕಟ್ಟಿರುವ ಅಡ್ಡಗೋಡೆಯನ್ನು ಕಿತ್ತು ಹಾಕಿ ನಿಕಟ ಸಂಪರ್ಕ ಬೆಳೆಸಲು ಅಮೃತಸರದ ತೀರ್ಮಾನಗಳನ್ನು ತಿಳುಕೊಂಡು ಕೃತಿಗಿಳಿಸಲು ಎಲ್ಲ ಪಾರ್ಟಿ ಸದಸ್ಯರೂ ಪಣ ತೊಡುವುದಗತ್ಯ.

ಪಂಜಾಬಿನಲ್ಲಿ ಕೇರಳ ದಿನಾಚರಣೆ

ಪಂಜಾಬ್ ಪ್ರಾಂತ್ಯ ಕಮ್ಯೂನಿಸ್ಟ್ ಪಾರ್ಟಿ ಸಮಿತಿಯು ಆಗಸ್ಟ್ ೨೫ರಂದು ರಾಜ್ಯಾದ್ಯಂತ ಕೇರಳ ದಿನಾಚರಣೆಯನ್ನಾಚರಿಸಿ ಕೇರಳದಲ್ಲಿಯ ನಿಜಪರಿಸ್ಥಿತಿಯನ್ನು ಜನತೆಗೆ ವಿವರಿಸಿತಲ್ಲದೆ ಕೇರಳ ಕಮ್ಯೂನಿಸ್ಟ್ ಪಾರ್ಟಿಯೊಂದಿಗೆ ಇರುವ ತನ್ನ ಐಕ್ಯತೆಯನ್ನು ಸಾರಿತು.

ದೊಡ್ಡಬಳ್ಳಾಪುರದಲ್ಲಿ ದಿವಂಗತ ಹಿರಣ್ಣಯ್ಯನವರ ಮಿತ್ರಮಂಡಳಿ

ದೊಡ್ಡಬಳ್ಳಾಪುರದಲ್ಲಿ ಬಸ್ ಸ್ಟ್ಯಾಂಡ್ ಬಳಿ ಹಾಕಿರುವ ದಿ|| ಹಿರಣ್ಣಯ್ಯನವರ ಥಿಯೇಟರಿನಲ್ಲಿ ದಿ|| ಹಿರಣ್ಣಯ್ಯನವರ ಪುತ್ರರಾದ ಮಾಸ್ಟರ್ ಹಿರಿಯಣ್ಣಯ್ಯ ಮತ್ತು ಮಿತ್ರಮಂಡಳಿಯವರು ದಿನನಿತ್ಯ ನಾಟಕಗಳನ್ನಾಡುತ್ತಿದ್ದಾರೆ. ದೀನದಲಿತರ, ಸಮಾಜ ಶೋಷಕರ, ಸಮಗ್ರ ಸಮಾಜ ಜೀವನೇತಿಹಾಸವನ್ನು ನಾಟಕಗಳ ಮೂಲಕ ಪ್ರತಿಬಿಂಬಿಸುವ ಇವರ ನಾಟಕಗಳು ಇಲ್ಲಿ ಜನಪ್ರಿಯವಾಗುತ್ತಿವೆ.

ವಾರದ ವಾರ್ತಾ ಸಮೀಕ್ಷೆ

(೨ನೇ ಪುಟದಿಂದ)

ಮೇಲೆ ಹತ್ತೋಟಿಯಲ್ಲಿರಿಸುವ ಸಮಸ್ಯೆಯನ್ನು ಕುರಿತು ಸಮ್ಮೇಳನದ ಫಲವಾಗಿ, ನ್ಯೂಕ್ಲಿಯರ್ ಶಸ್ತ್ರದ ಸ್ಫೋಟನೆ ಎಲ್ಲೇ ನಡೆದರೂ ಪತ್ತೆ ಹಚ್ಚುವ ಸಾಧ್ಯತೆಯು ಉಂಟಾಗಿದೆ. ಅಷ್ಟೇ ಅಲ್ಲದೆ ಪ್ರಯೋಗಗಳ ಮೇಲೆ ಹತೋಟಿ ಇರಿಸಿಕೊಳ್ಳುವುದರ ಬಗ್ಗೆ ಅನುಸರಿಸುವ ಕ್ರಮದ ಬಗ್ಗೆಯೂ ಒಮ್ಮತದ ಅಭಿಪ್ರಾಯ ವ್ಯಕ್ತಗೊಂಡಿದೆ.


ಯಶಸ್ವಿಯಾಗಿ ಮುಕ್ತಾಯಗೊಂಡ ಈ ಸಮ್ಮೇಳನವು ಅಣು ಶಸ್ತ್ರಗಳ ಪ್ರಯೋಗವನ್ನು ತಡೆಯಲು ಮಹತ್ವವಾದ ಸೇವೆ ಸಲ್ಲಿಸಿದೆ.

ಸೋವಿಯತ್ ಯೂನಿಯನ್ ಏಕಪಕ್ಷೀಯವಾಗಿ ಅಣುಶಸ್ತ್ರ ಪ್ರಯೋಗಗಳನ್ನು ನಿಲ್ಲಿಸಿದರೂ, ಬ್ರಿಟನ್ ಅಮೆರಿಕಗಳು ಈವರೆಗೆ ಹಿಂಜರಿಯುತ್ತಿದ್ದುವು. ಅಣುಶಸ್ತ್ರಗಳ ಪ್ರಯೋಗವನ್ನು ತನಿಖೆ ಮಾಡುವುದು ಮತ್ತು ಅದನ್ನು ಹತೋಟಿಯಲ್ಲಿರಿಸುವುದೂ ಪ್ರಮುಖ ಪ್ರಶ್ನೆಯಾಗಿತ್ತು ಅದೀಗ ಬಗೆಹರಿದಂತಾಗಿದೆ. ಬ್ರಿಟನ್ ಅಮೆರಿಕಾಗಳೂ ಸಹ ಪ್ರಯೋಗವನ್ನು ಕ್ಷಿಪ್ರದಲ್ಲೇ ನಿಲ್ಲಿಸುವುದಾಗಿ ಘೋಷಿಸುವ ನಿರೀಕ್ಷೆ ಇದೆ.

—ರಮೇಶ

ಮೆಟ್ರಿಕ್ ಪದ್ಧತಿ-

ಇದರ ಬಗ್ಗೆ ತಿಳಿವಳಿಕೆ



ವಿವಿಧ ಅಳತೆಗಳ ಮೂಲ ಮಾನವಾದ "ಮೀಟರ್" ಎಂಬ ಪದದಿಂದ ಈ ಪದ್ಧತಿಯು 'ಮೆಟ್ರಿಕ್ ಪದ್ಧತಿ' ಎಂದು ಹೆಸರುಗೊಂಡಿದೆ. ಮೆಟ್ರಿಕ್ ಪದ್ಧತಿಯಲ್ಲಿ, ದಶಮಾಂಶ ಪದ್ಧತಿಗಳಲ್ಲಿರುವಂತೆ, ಲೆಕ್ಕಾಚಾರಗಳಿಗೆ ಉಪಯೋಗಿಸುವ ಮೂಲ ಸಂಖ್ಯೆ ಅಥವಾ ಅಂಕಿ–10. ಅಳತೆಯು ಉದ್ದದಲ್ಲೇ ಆಗಲಿ, ತೂಕದಲ್ಲೇ ಆಗಲಿ ಅಥವಾ ಗಾತ್ರದಲ್ಲೇ (ಘನ ಪರಿಮಾಣ) ಆಗಲಿ, ಅದರ ಹೆಚ್ಚಿನ ಅಥವಾ ಕೆಳಗಿನ ಮೌಲ್ಯಕ್ಕೆ ಪರಿವರ್ತಿಸುವುದಕ್ಕೆ ಬೇಕಾದ ಸಂಖ್ಯೆ-10.

ಮೆಟ್ರಿಕ್ ಪದ್ಧತಿಯಲ್ಲಿ ಪ್ರಮಾಣ (ಯೂನಿಟ್ಟು) ಗಳ ಅಪವರ್ತ್ಯಗಳನ್ನು (ಮಲ್ಟಿಪಲ್ಸ್) ಪ್ರತ್ಯಯಗಳ (ಪ್ರಿಫಿಕ್ಸ್) ಮೂಲಕ ಸೂಚಿಸಲಾಗುವುದು. ಡೆಕ-(10 ಸಾರಿ), ಹೆಕ್ಟೊ - (10x10 = 100 ಸಾರಿ) ಮತ್ತು ಕಿಲೊ– (10x10x10 = 1,000 ಸಾರಿ).

ಉಪ ಪ್ರಮಾಣ (ಸಬ್‌ಯೂನಿಟ್ಟು)ಗಳನ್ನು ಡೆಸಿ-(ಹತ್ತರಲ್ಲಿ ಒಂದು ಭಾಗ,-1/10), ಸೆಂಟಿ-(ನೂರರಲ್ಲಿ ಒಂದು ಭಾಗ-1/100) ಮತ್ತು ಮಿಲಿ-(ಸಾವಿರದಲ್ಲಿ ಒಂದು ಭಾಗ-1/1,000), ಈ ಪ್ರತ್ಯಯಗಳಿಂದ ಸೂಚಿಸಲಾಗುವುದು.

ಮೆಟ್ರಿಕ್ ತೂಕ ಮತ್ತು ಅಳತೆಗಳ ಪದ್ಧತಿಗೆ 1958 ನೇ ಅಕ್ಟೋಬರ್ ತಿಂಗಳಿನಿಂದ ಬದಲಾಯಿಸಲಾಗುವುದು.

ಮೆಟ್ರಿಕ್ ರೀತಿಯಲ್ಲಿ ಉದ್ದದ ಮಾನಗಳನ್ನು ತಿಳಿದುಕೊಳ್ಳಿ

ಉದ್ದದ ಮೂಲ ಮಾನ
ಮೀಟರು
ಅಂದರೆ 40 ಅಂಗುಲಗಳು (ಅದರ ಸಮೀಪ)
ಕಿಲೋ ಮೀಟರು = 5 ಫರ್ಲಾಂಗುಗಳು

ಉಪ ಪ್ರಮಾಣಗಳು
(ಸಬ್ ಯೂನಿಟ್ಟುಗಳು)

10 ಮಿಲಿಮೀಟರು	=	1 ಸೆಂಟಿಮೀಟರು
10 ಸೆಂಟಿಮೀಟರು	=	1 ಡೆಸಿಮೀಟರು
10 ಡೆಸಿ ಮೀಟರು	=	1 ಮೀಟರು

ಅಪವರ್ತ್ಯಗಳು (ಮಲ್ಟಿಪಲ್ಸ್)

10 ಮೀಟರು	=	1 ಡೆಕಮೀಟರು
10 ಡೆಕಮೀಟರು	=	1 ಹೆಕ್ಟೊ ಮೀಟರು
10 ಹೆಕ್ಟೊಮೀಟರು	=	1 ಕಿಲೊಮೀಟರು

DA 58/109

2

ಭಾರತ ಸರಕಾರದಿಂದ ಪ್ರಚುರಗೊಳಿಸಲಾಗಿದೆ.

REG. No. M 6867

Edited Printed and Published by C. R. Krishna Rao, at Janashakthi Printers L—59, K. V. Temple St., Sultanpet Bangalore—2 phone 3810